## ಚಟುವಟಿಕೆ



### ಮಾಯದ ಚೌಕ

ಖಾಲಿಯಾಗಿರುವ ಚೌಕಗಳನ್ನು 46 ರಿಂದ 54 ರೊಳಗಿನ ಸಂಖ್ಯೆಗಳಿಂದ ತುಂಬಬೇಕು. ಆದರೆ ಅವುಗಳ ಮೊತ್ತವು ಪ್ರತಿಯೊಂದು ಸಾಲಿನಲ್ಲಿ ಮೇಲಿನಿಂದ ಕೆಳಗೆ ಹಾಗೂ ಎಡದಿಂದ ಬಲಕ್ಕೆ ಸಂಖ್ಯೆಗಳನ್ನು ಕೂಡಿಸಿದಾಗ ಬರುವ ಮೊತ್ತವು 150 ಆಗಿರಬೇಕು.

| | | |
|---|---|---|
| | | 49 |
| 46 | | |
| | 52 | 47 |

ಖಾಲಿಯಾಗಿರುವ ಈ ಮಾಯದ ಚೌಕಗಳನ್ನು 21 ರಿಂದ 29 ರೊಳಗಿನ ಸಂಖ್ಯೆಗಳಿಂದ ತುಂಬಿರಿ. ಇದರ ಅಡ್ಡ ಸಾಲುಗಳ ಮತ್ತು ಲಂಬ ಸಾಲುಗಳ (ಮೇಲಿನಿಂದ ಕೆಳಗೆ) ಸಂಖ್ಯೆಗಳ ಮೊತ್ತವು 75 ಆಗಿರಬೇಕು

| | | |
|---|---|---|
| | | |
| | | |
| 21 | | |

**ಗುಂಪಿನ ಚಟುವಟಿಕೆ**



ನಿಮ್ಮ ಗೆಳೆಯರೊಂದಿಗೆ ಸೇರಿ ಇದೇ ತರದ ಇನ್ನೂ ಕೆಲವು ಮಾಯದ ಚೌಕಗಳನ್ನು ರಚಿಸಿರಿ.

## ಚಟುವಟಿಕೆ



ಕೆಳಗಿನ ಗಣಿತ ವಾಕ್ಯಗಳನ್ನು ಓದಿ ಪಟ್ಟಿಯಲ್ಲಿ ಕೊಟ್ಟಿರುವ ಸರಿಯಾದ ಪ್ರಶ್ನೆಯನ್ನು ಆರಿಸಿ, ಅದಕ್ಕೆ (✓) ಗುರುತನ್ನು ಹಾಕಿರಿ.

(1) ಒಂದು ಪೆಟ್ಟಿಗೆಯಲ್ಲಿ 38 ಹಣ್ಣುಗಳಂತೆ ಹಣ್ಣಿನವನಲ್ಲಿ 50 ಪೆಟ್ಟಿಗೆಗಳಿವೆ.

i) ಎಲ್ಲಾ ಹಣ್ಣುಗಳನ್ನು ಕೊಂಡುಕೊಳ್ಳಲು ಅವನಿಗೆ ಎಷ್ಟು ಹಣ ಬೇಕು?

Ii) ಹಣ್ಣಿನವನಲ್ಲಿ ಇರುವ ಒಟ್ಟು ಹಣ್ಣುಗಳೆಷ್ಟು?

Iii) ಪ್ರತಿಯೊಂದು ಹಣ್ಣಿನ ಮಾರಾಟದ ಬೆಲೆಯೆಷ್ಟು?



(2) ರೇವತಿ ಮತ್ತು ಅನುವು ಕ್ರಮವಾಗಿ ₹ 47 ಮತ್ತು ₹ 43 ಕ್ಕೆ ಪುಸ್ತಕಗಳನ್ನು ಕೊಂಡುಕೊಂಡರು. ಅವರು ಅಂಗಡಿಯವನಿಗೆ ₹100 ಕೊಟ್ಟರು.

i) ಅಂಗಡಿಯಲ್ಲಿರುವ ಒಟ್ಟು ಪುಸ್ತಕಗಳ ಸಂಖ್ಯೆಯೆಷ್ಟು?

ii) ಅಂಗಡಿಯವನು ಅವರಿಗೆ ಹಿಂದಕ್ಕೆ ಕೊಡಬೇಕಾದ ಹಣವೆಷ್ಟು?

iii) ಆ ಪುಸ್ತಕದ ಅಂಗಡಿಯಲ್ಲಿ ಬೇಕಾದಷ್ಟು ಪುಸ್ತಕಗಳು ಇದೆಯೇ?



(3) ಒಂದು ಮೀನು ಸಂಗ್ರಹಾಲಯದಲ್ಲಿ 15 ಮೀನಿನ ತೊಟ್ಟಿಗಳಿವೆ. ಪ್ರತಿಯೊಂದು ತೊಟ್ಟಿಯಲ್ಲಿ ತರತರದ 20 ಮೀನುಗಳಿವೆ.

i) ಮೀನು ಸಂಗ್ರಹಾಲಯದಲ್ಲಿರುವ ತರತರದ ಮೀನುಗಳು ಒಟ್ಟು ಎಷ್ಟು?

ii) ಎಷ್ಟು ತರದ ಮೀನುಗಳನ್ನು ಬೇರೆ ಸ್ಥಳಗಳಿಗೆ ಕಳುಹಿಸಲಾಯಿತು?

iii) ಆ ಮೀನು ಸಂಗ್ರಹಾಲಯದಲ್ಲಿರುವ ಒಟ್ಟು ಎಷ್ಟು ಜನರು ಇರುವರು?



(4) ಸರ್ಕಸ್ ಗುಂಪಿನಲ್ಲಿ ಒಟ್ಟು 176 ಸದಸ್ಯರು (ಮಂದಿ) ಇದ್ದಾರೆ. ಪ್ರತಿಯೊಂದು ಡೇರೆಯಲ್ಲಿ (ಟೆಂಟ್) 8 ಜನರಂತೆ ಅವರು ಉಳಿದುಕೊಂಡರು.

i) ಸರ್ಕಸ್ಸನ್ನು ನೋಡಿದ ಒಟ್ಟು ಜನರೆಷ್ಟು?

ii) ಸರ್ಕಸ್‌ನ ಗುಂಪಿನವರು ಉಳಿದುಕೊಳ್ಳಲು ಎಷ್ಟು ಡೇರೆಗಳನ್ನು ನಿರ್ಮಿಸಲಾಯಿತು?

iii) ಸರ್ಕಸ್ಸನ್ನು ಬಿಟ್ಟು ಹೋದವರ ಸಂಖ್ಯೆ ಎಷ್ಟು?

(5) ಅಂಗಡಿಯವನಲ್ಲಿ 144 ಮೊಟ್ಟೆಗಳಿವೆ. ಪ್ರತಿಯೊಂದರಲ್ಲಿ 12 ಮೊಟ್ಟೆಗಳಂತೆ ಅವನು ತಟ್ಟೆಗಳಲ್ಲಿ ಅವುಗಳನ್ನು ಇಡುತ್ತಾನೆ.

i) ಅವನಿಗೆ ಇನ್ನೆಷ್ಟು ಮೊಟ್ಟೆಗಳು ಬೇಕಾಗಿವೆ?

ii) ಅವನು ಮಾರಾಟ ಮಾಡಿದ ಹೊಸ ಮೊಟ್ಟೆಗಳೆಷ್ಟು?

## ಭಾಗಾಕಾರ

ದಿವ್ಯಳ ಅತ್ತೆಯು ಡೆಲ್ಲಿಯಿಂದ ದಿವ್ಯಳ ಮನೆಗೆ ತನ್ನ ಮೂವರು ಹೆಣ್ಣು ಮಕ್ಕಳಾದ ವರ್ಷ ರೇಶ್ಮ ಮತ್ತು ಪ್ರಿಯಾ ಇವರೊಂದಿಗೆ ದಸರಾ ರಜೆಯಲ್ಲಿ ಬಂದರು.

ದಿವ್ಯಳ ತಮ್ಮನಿಗೆ ಭಾಗಾಕಾರದ ಲೆಕ್ಕದಲ್ಲಿ ಒಂದು ಸಂದೇಹವಿತ್ತು. ಅವನು ಆ ಸಂದೇಹವನ್ನು ತನ್ನ ಅಕ್ಕ ಮತ್ತು ಅತ್ತೆಯ ಮಕ್ಕಳೊಂದಿಗೆ ತಿಳಿಸಿದನು. ಅವರೆಲ್ಲರೂ ಆ ಲೆಕ್ಕವನ್ನು ಬೇರೆ ಬೇರೆಯಾಗಿ ಕುಳಿತು ಮಾಡಲು ಆರಂಭಿಸಿದರು.

**7692 ÷ 6 ಈ ಲೆಕ್ಕವನ್ನು ಅವರು ಮಾಡಬೇಕಾಗಿತ್ತು.**

ಪ್ರಿಯಾಳು ಈ ಕೆಳಗಿನ ಕ್ರಮದಲ್ಲಿ ಪರಿಹಾರ (ಉತ್ತರ) ಕಂಡು ಹಿಡಿದಳು.

7692 = 7000+600+90+2
= 6000+1000+600+90+2
= 6000+1600+90+2
= 6000+1200+400+90+2
= 6000+1200+490+2
= 6000+1200+480+10+2
= 6000 +1200+480+12

ನಾವೀಗ 7692 ನ್ನು ಸಮನಾಗಿ 6 ಮಂದಿಗೆ ಹಂಚೋಣ.

7692 ÷ 6 = (6000 ÷ 6)+(1200 ÷ 6)
+ (480 ÷ 6)+(12 ÷ 6)
= 1000+200+80+2

ಆದುದರಿಂದ ಪ್ರತಿಯೊಬ್ಬರಿಗೆ ದೊರೆತ ಪಾಲು **1282** ಆಗಿದೆ.

ವರ್ಷಾಳು ಈ ಕೆಳಗಿನ ಕ್ರಮದಲ್ಲಿ ಪರಿಹಾರ ಕಂಡು ಹಿಡಿದಳು.

7692 = 7ಸಾ+6ನೂ+9ಹ+2ಬಿ
= 7ಸಾ +1ಸಾ+6ನೂ+9ಹ+2
= 6ಸಾ+16ನೂ+9ಹ+2
= 6ಸಾ+12ನೂ+4ನೂ+9ಹ+2
= 6ಸಾ+12ನೂ+49ಹ+2
= 6ಸಾ+12ನೂ+48ಹ+12

ನಾವೀಗ 7692 ನ್ನು ಸಮನಾಗಿ 6 ಮಂದಿಗೆ ಹಂಚೋಣ.

7692 ÷ 6 = (6ಸಾ ÷ 6)+(12ನೂ ÷6)
+ (48ಹ ÷6)+(12ಬಿ ÷ 6)
= 1ಸಾ+2ನೂ+8ಹ+2
= 1282

ಆದುದರಿಂದ ಪ್ರತಿಯೊಬ್ಬರಿಗೆ ದೊರೆತ ಪಾಲು **1282** ಆಗಿದೆ.

**ರೇಷ್ಮಾಳು ಅನುಸರಿಸಿದ ಪದ್ಧತಿ, ನಾವೀಗ 7692 ನ್ನು 6 ಮಂದಿಗೆ ಸಮನಾಗಿ ಹಂಚೋಣ.**

```
     500 + 500 + 200 + 80 + 2
   ---------------------------
 6 | 7692
   | 3000
   | ----
   | 4692
   | 3000
   | ----
   | 1692
   | 1200
   | ----
   |  492
   |  480
   | ----
   |   12
   |   12
   | ----
   |    0
```



| | | |
|---|---|---|
| ಭಾಜ್ಯ | = | 7692 |
| ಭಾಜಕ | = | 6 |
| ಭಾಗಲಬ್ಧ | = | 1282 |
| ಶೇಷ | = | 0 |

ದಿವ್ಯಳು ಈ ಪದ್ಧತಿಯ ಮೂಲಕ ಪರಿಹಾರ ಕಂಡು ಹಿಡಿದಳು.
ಈಗ ನಾವು 7692 ನ್ನು ಸಮನಾಗಿ 6 ಮಂದಿಗೆ ಹಂಚೋಣ.

ಸಮಪಾಲು



7 ಸಾ — 1000 1000 1000 1000 1000 1000

ನಾವೀಗ 1000 ವನ್ನು 10 ನೂರುಗಳಾಗಿ ಪರಿವರ್ತಿಸೋಣ.

1000 → 100 100 100 100 100 100
100 100 100 100 100 100

10ನೂ + 6 ನೂ — 100 100 100 100 100 100
100 100 100 100 100 100

ನಾವೀಗ 400 ನ್ನು 40 ಹತ್ತುಗಳಾಗಿ ಪರಿವರ್ತಿಸೋಣ.

100 → 10 10 10 10 10 10 10 10 10 10
100 → 10 10 10 10 10 10 10 10 10 10
100 → 10 10 10 10 10 10 10 10 10 10
100 → 10 10 10 10 10 10 10 10 10 10

40ಹ + 9 ಹ — 10 10 10 10 10 10
10 10 10 10 10 10
10 10 10 10 10 10
10 10 10 10 10 10
10 10 10 10 10 10
10 10 10 10 10 10
10 10 10 10 10 10
10 10 10 10 10 10

ನಾವೀಗ 10 ನ್ನು 10 ಬಿಡಿಗಳಾಗಿ ಪರಿವರ್ತಿಸೋಣ.

10 → 1 1 1 1 1
1 1 1 1 1

12 ಬಿ — 1 1 1 1 1 1
1 1 1 1 1 1

ಪ್ರತಿಯೊಬ್ಬರಿಗೆ ದೊರೆತ ಪಾಲು 1282

ಭಾಗಲಬ್ಧ = 1282
ಶೇಷ = 0

ಗಣಿತ

ಆ ನಾಲ್ವರು ಬೇರೆ ಬೇರೆ ಪದ್ಧತಿಗಳನ್ನು ಅನುಸರಿಸಿದರೂ ಅವರೆಲ್ಲರಿಗೂ ದೊರೆತ ಪರಿಹಾರ (ಉತ್ತರ)ವು ಒಂದೇ ಆಗಿದೆ.

**ಭಾಗಾಕಾರದ ಸಮಸ್ಯೆಗಳನ್ನು ಪರಿಹರಿಸಲು ನಾವೀಗ  ಗಣಿತವನ್ನು ಅನುಸರಿಸೋಣ.**

**ಹಂತ 1**

7 ಸಾವಿರಗಳನ್ನು 6 ಸಾವಿರಗಳ ಒಂದು ಗುಂಪಾಗಿ ವಿಂಗಡಿಸಬಹುದು.

ಆಗ 7 ÷ 6 = 1 ಸಾವಿರ, ಶೇಷ = 1.

```
       1
       ಸಾ  ನೂ  ಹ  ಬಿ
    ----------------
 6 |   7   6   9   2
       6
      ---
       1
```

**ಹಂತ 2**

ನೂರರ ಸ್ಥಾನದಲ್ಲಿರುವ 6 ನ್ನು ಕೆಳಗಡೆ ತಂದು '1' ರ ನಂತರ ಅದನ್ನು ಬರೆಯಿರಿ. 16 ನೂರುಗಳನ್ನು 6 ನೂರುಗಳ 2 ಗುಂಪುಗಳಾಗಿ ವಿಂಗಡಿಸಬಹುದು. ಆಗ 16 ÷ 6 = 2 ನೂರುಗಳು, ಶೇಷ = 4.

```
       1   2
       ಸಾ  ನೂ  ಹ  ಬಿ
    ----------------
 6 |   7   6   9   2
       6   ↓
      -------
       1   6
       1   2
      -------
           4
```

**ಹಂತ 3**

ಹತ್ತರ ಸ್ಥಾನದಲ್ಲಿರುವ '9' ನ್ನು ಕೆಳಗಡೆ ತಂದು '4' ರ ನಂತರ ಅದನ್ನು ಬರೆಯಿರಿ. 49 ಹತ್ತುಗಳನ್ನು 6 ಹತ್ತುಗಳ 8 ಗುಂಪುಗಳಾಗಿ ವಿಂಗಡಿಸಬಹುದು. ಆಗ, 49 ÷ 6 = 8 ಹತ್ತುಗಳು, ಶೇಷ = 1.

```
       1   2   8
       ಸಾ  ನೂ  ಹ  ಬಿ
    ----------------
 6 |   7   6   9   2
       6       |
      ---      |
       1   6   |
       1   2   ↓
      -----------
           4   9
           4   8
      -----------
               1
```

**ಹಂತ 4**

ಬಿಡಿಗಳ ಸ್ಥಾನದಿಂದ '2' ನ್ನು ಕೆಳಗಡೆ ತಂದು ಅದನ್ನು 1 ರ ನಂತರ ಬರೆಯಿರಿ. 12 ಬಿಡಿಗಳನ್ನು 6 ಬಿಡಿಗಳ 2 ಗುಂಪುಗಳಗಿ ವಿಂಗಡಿಸಬಹುದು. ಆಗ, 12 ÷ 6 = 2 ಬಿಡಿಗಳು, ಶೇಷ = 0.

```
       1   2   8   2
       ಸಾ  ನೂ  ಹ  ಬಿ
    ----------------
 6 |   7   6   9   2
       6           |
      -------      |
       1   6       |
       1   2       |
      -------      |
           4   9   |
           4   8   ↓
      ---------------
               1   2
               1   2
      ---------------
                   0
```

**ಆದುದರಿಂದ, 7692 ÷ 6 = ಭಾಗಲಬ್ಧ = 1282, ಮತ್ತು ಶೇಷ = 0.**

ಗಣಿತ



**ವಿದ್ಯಾರ್ಥಿಗಳ ವಸತಿಗೃಹವೊಂದರಲ್ಲಿ ಆಹಾರಕ್ಕೆಂದು ಒಂದು ವಾರಕ್ಕೆ ₹ 4,809 ಖರ್ಚಾಗುತ್ತದೆ. ಹಾಗಾದರೆ ಒಂದು ದಿನಕ್ಕೆ ಆಗುವ ಖರ್ಚೆಷ್ಟೆಂದು ಕಂಡು ಹಿಡಿಯಿರಿ.**



**4,809 ನ್ನು 7 ರಿಂದ ಭಾಗಿಸಿರಿ.**

**ಹಂತ 1**

4 ಸಾವಿರಗಳನ್ನು 7 ಸಾವಿರಗಳ ಗುಂಪುಗಳಾಗಿ ವಿಂಗಡಿಸಲು ಸಾಧ್ಯವೇ?
ಇಲ್ಲ.
ಆದರೆ 48 ನೂರುಗಳನ್ನು 7 ನೂರುಗಳ 6 ಗುಂಪುಗಳಾಗಿ ವಿಂಗಡಿಸಲು ಸಾಧ್ಯವಿದೆ.
ಆಗ, 48 ÷ 7 = 6, ಶೇಷವು 6 ನೂರುಗಳು.

```
     ಸಾ ನೂ ಹ ಬಿ
     0  6
  7 | 4  8  0  9
     4  2
        6
```

**ಹಂತ 2**

ಹತ್ತರ ಸ್ಥಾನದಲ್ಲಿರುವ '0' ನ್ನು ಕೆಳಗಡೆ ತಂದು '6' ರ ನಂತರ ಬರೆಯಿರಿ.
60 ಹತ್ತುಗಳನ್ನು 7 ಹತ್ತುಗಳ 8 ಗುಂಪುಗಳಾಗಿ ವಿಂಗಡಿಸಿ.
ಆಗ, 60 ÷ 7 = 8, ಶೇಷವು 4 ಹತ್ತುಗಳು.

```
     ಸಾ ನೂ ಹ ಬಿ
     0  6  8
  7 | 4  8  0  9
     4  2
        6  0
        5  6
           4
```

**ಹಂತ 3**

ಬಿಡಿಗಳ ಸ್ಥಾನದಲ್ಲಿರುವ '9' ನ್ನು ಕೆಳಗಡೆ ತಂದು '4' ರ ನಂತರ ಬರೆಯಿರಿ. 49 ಬಿಡಿಗಳನ್ನು 7 ಬಿಡಿಗಳ 7 ಗುಂಪುಗಳಾಗಿ ವಿಂಗಡಿಸಿ.
ಆಣ, 49 ÷ 7 = 7, ಶೇಷವು 0.

```
     ಸಾ ನೂ ಹ ಬಿ
     0  6  8  7
  7 | 4  8  0  9
     4  2
        6  0
        5  6
           4  9
           4  9
              0
```

**ಆದುದರಿಂದ, ವಿದ್ಯಾರ್ಥಿಗಳ ವಸತಿಗೃಹದಲ್ಲಿ ಒಂದು ದಿನಕ್ಕೆ ಆಗುವ ಖರ್ಚು = ₹ 687.**



ಒಂದು ಕಾರ್ಖಾನೆಯಲ್ಲಿ 36 ಮೂಟೆ ಕೋಳಿಯ ಆಹಾರವನ್ನು ₹ 3024 ಕ್ಕೆ ಮಾರಾಟ ಮಾಡಿದರೆ, ಒಂದು ಮೂಟೆಯ ಬೆಲೆಯೆಷ್ಟೆಂದು ಕಂಡು ಹಿಡಿಯಿರಿ.

**3,024 ನ್ನು 36 ರಿಂದ ಭಾಗಿಸಿರಿ.**

**ಹಂತ 1**

3 ಸಾವಿರಗಳನ್ನು 36 ಸಾವಿರಗಳ ಗುಂಪುಗಳಾಗಿ ವಿಂಗಡಿಸಲು ಸಾಧ್ಯವೇ? ಇಲ್ಲ.

30 ನೂರುಗಳನ್ನು 36 ನೂರುಗಳ ಗುಂಪುಗಳಾಗಿ ವಿಂಗಡಿಸಲು ಸಾಧ್ಯವೇ? ಇಲ್ಲ.

ಆದುದರಿಂದ 302 ಹತ್ತುಗಳನ್ನು 36 ಹತ್ತುಗಳ 8 ಗುಂಪುಗಳಾಗಿ ವಿಂಗಡಿಸಲು ಸಾಧ್ಯವಿದೆ.

$7 \times 36 = 252$

$8 \times 36 = 288$

$9 \times 36 = 324$

$302 \div 36 = 8$ ಹತ್ತುಗಳು ಮತ್ತು ಶೇಷವು 14.

| | ಸಾ | ನೂ | ಹ | ಬಿ |
|---|---|---|---|---|
| | 0 | 0 | 8 | |
| 36 | 3 | 0 | 2 | 4 |
| | 2 | 8 | 8 | |
| | | 1 | 4 | |

**ಹಂತ 2**

ಬಿಡಿಗಳ ಸ್ಥಾನದಲ್ಲಿರುವ 4 ನ್ನು ಕೆಳಗಡೆ ತಂದು 14 ರ ನಂತರ ಬರೆಯಿರಿ.

144 ಬಿಡಿಗಳನ್ನು 36 ಬಿಡಿಗಳ 4 ಗುಂಪುಗಳಾಗಿ ವಿಂಗಡಿಸಬಹುದು.

$2 \times 36 = 252$

$3 \times 36 = 108$

$4 \times 36 = 144$

$5 \times 36 = 188$

**$144 \div 36 = 4$ ಹತ್ತುಗಳು ಮತ್ತು ಶೇಷವು 0.**

| | ಸಾ | ನೂ | ಹ | ಬಿ |
|---|---|---|---|---|
| | 0 | 0 | 8 | 4 |
| 36 | 3 | 0 | 2 | 4 |
| | 2 | 8 | 8 | |
| | | 1 | 4 | 4 |
| | | 1 | 4 | 4 |
| | | | | 0 |

**ಆದುದರಿಂದ, ಒಂದು ಮೂಟೆ ಕೋಳಿಯ ಆಹಾರದ ಬೆಲೆಯು ₹ 84**



## ಅಭ್ಯಾಸದ ವೇಳೆ

(1) ಕೆಳಗಿನ ಭಾಗಾಕಾರ ಲೆಕ್ಕಗಳನ್ನು ಮಾಡಿ ಭಾಗಲಬ್ಧ ಮತ್ತು ಶೇಷಗಳನ್ನು ಕಂಡು ಹಿಡಿಯಿರಿ.

i) 6,005 ÷ 5 ii) 3264 ÷ 3

iii) 5,697 ÷ 9 iv) 9,450 ÷ 30

v) 5,150 ÷ 25 vi) 6,490 ÷ 55

(2) 3,375 ಮಾವಿನ ಹಣ್ಣುಗಳನ್ನು 75 ಬುಟ್ಟಿಗಳಲ್ಲಿ ಸಮನಾಗಿ ಜೋಡಿಸಲ್ಪಟ್ಟಾಗ, ಪ್ರತಿಯೊಂದು ಬುಟ್ಟಿಯಲ್ಲಿ ಹಿಡಿಯುವ ಮಾವಿನ ಹಣ್ಣುಗಳೆಷ್ಟು?



(3) ನ್ಯಾಯ ಬೆಲೆಯ ಅಂಗಡಿಯೊಂದರಲಿè 50 ದಿನಗಳಲ್ಲಿ ಒಟ್ಟು 13,500 ಕಿ.ಗ್ರಾಂ ಅಕ್ಕಿಯ ಮಾರಾಟವಾಯಿತು. ಹಾಗಾದರೆ ಒಂದು ದಿನ ಮಾರಾಟವಾದ ಅಕ್ಕಿ ಎಷ್ಟು? (ಕಿ.ಗ್ರಾಂ ಗಳಲ್ಲಿ ತಿಳಿಸಿ)



(4) ಜೂನ್ ತಿಂಗಳಲ್ಲಿ ಒಂದು ಕೋಳಿ ಸಾಕಣೆಯ ಕೇಂದ್ರದಲ್ಲಿ ಒಟ್ಟು 19,500 ಮೊಟ್ಟೆಗಳ ಸಂಗ್ರಹವಾಯಿತು. ಹಾಗಾದರೆ ಆ ತಿಂಗಳಲ್ಲಿ ಒಂದು ದಿನ ಸಂಗ್ರಹವಾದ ಮೊಟ್ಟೆಗಳೆಷ್ಟು?





(5) ಅಂಚೆಕಚೇರಿಯೊಂದರಲ್ಲಿ 10 ದಿನಗಳಲ್ಲಿ ₹ 12,750 ಬೆಲೆಯ ಅಂಚೆ ಚೀಟಿಗಳು ಮಾರಾಟವಾದರೆ ಒಂದು ದಿನದಲ್ಲಿ ಮಾರಾಟವಾದ ಅಂಚೆ ಚೀಟಿಗಳ ಬೆಲೆಯನ್ನು ಲೆಕ್ಕ ಹಾಕಿ.







(6) ಒಂದು ಕಂಪೆನಿಯಲ್ಲಿ 27 ದಿನಗಳಲ್ಲಿ 13,375 ಪಾತ್ರೆಗಳನ್ನು ತಯಾರಿಸಲಾಯಿತು. ಹಾಗಾದರೆ ಆ ಕಂಪೆನಿಯಲ್ಲಿ ಒಂದು ದಿನದಲ್ಲಿ ತಯಾರಿಸಲಾದ ಪಾತ್ರೆಗಳೆಷ್ಟು?



# ಕೆಲಸದ ಹಾಳೆ

ಕೆಳಗಿನವುಗಳನ್ನು ಉತ್ತರಿಸಿ.

(1) ಐದಂಕೆಯ ಸಂಖ್ಯೆಯು _______

i) ಹತ್ತು ಸಾವಿರ  ii) ಸಾವಿರದ ನಲ್ವತ್ತು

iii) ನೂರು  iv) ಹತ್ತು

(2) "ಆರು ಲಕ್ಷದ ಐವತ್ತು ಸಾವಿರದ ನಲ್ವತ್ತು" ಇದರ ಸಂಖ್ಯಾ ರೂಪ _______.

i) 65,040  ii) 6,50,040

iii) 6,50,400  iv) 654

(3) ಸಂಖ್ಯೆಯ ಹೆಸರನ್ನು ಅಕ್ಷರದಲ್ಲಿ ಬರೆಯಿರಿ 6,54,302 ಎಂಬುದು _______.

i) ಆರು ಲಕ್ಷದ, ಐವತ್ತ ನಾಲ್ಕು ಸಾವಿರದ ಮುನ್ನೂರ ಎರಡು.

ii) ಅರುವತ್ತೈದು ಸಾವಿರದ ನಾನೂರ ಮೂವತ್ತೆರಡು.

iii) ಅರುವತ್ತು ಲಕ್ಷದ ಐವತ್ತನಾಲ್ಕು ಸಾವಿರದ ಮುನ್ನೂರ ಎರಡು.

iv) ಅರುವತ್ತೈದು ಲಕ್ಷದ ನಾಲ್ಕು ಸಾವಿರದ ಮೂವತ್ತೆರಡು.

(4) 76,543 ರಲ್ಲಿ 7 ರ ಸ್ಥಾನ ಬೆಲೆಯು _______.

i) 7  ii) 70

iii) 70,000  iv) 7,000

(5) 54,302 ಎಂಬುದು _______ ಗೆ ಸಮನಾಗಿದೆ.

i) 5 + 4 + 3 + 0 + 2

ii) 5,000 + 400 + 30 + 2

iii) 50,000 + 4,000 + 300 + 2

iv) 5,000 + 4,000 + 30 + 2

(6) 96,160 ಈ ಸಂಖ್ಯೆಯಲ್ಲಿರುವ ಎರಡು '6' ಗಳ ಸ್ಥಾನ ಬೆಲೆಗಳ ವ್ಯತ್ಯಾಸವು _______.

i) 0  ii) 994  iii) 5,940  iv) 6,000

(7) 2,9,5,4 ಮತ್ತು 6 ಈ ಅಂಕೆಗಳನ್ನು ಉಪಯೋಗಿಸಿ 5 ಅಂಕೆಯ ಅತೀ ದೊಡ್ಡ ಸಂಖ್ಯೆಯನ್ನು ರಚಿಸಿದಾಗ ಬರುವ ಆ ಸಂಖ್ಯೆ _______.

i) 24,569 ii) 96,542
Iii) 92,456 iv) 95,624

(8) ಯಾವುದು ಸರಿ?

I) 49,505 ಎಂಬುದು 49,550 ಕ್ಕಿಂತ ಕಡಿಮೆ.

ii) 49,550 ಎಂಬುದು 45,950 ಕ್ಕಿಂತ ಕಡಿಮೆ.

iii) 45,960 ಎಂಬುದು 40,965 ಕ್ಕಿಂತ ಕಡಿಮೆ.

iv) 45,906 ಎಂಬುದು 45,609 ಕ್ಕಿಂತ ಕಡಿಮೆ.

(9) ಯಾವುದು ದೊಡ್ಡ ಸಂಖ್ಯೆ?

i) 5,405 ii) 4,505
iii) 5,054 iv) 5,504

(10) ಸಂಖ್ಯೆ 75,432 ರಲ್ಲಿ 5 ಮತ್ತು 3 ಅಂಕೆಗಳನ್ನು ಆಯಾ ಸ್ಥಾನದಲ್ಲಿ ಅದಲು ಬದಲಾಗಿ ಮಾಡಿದಾಗ, ಬರುವ ಹೊಸ ಸಂಖ್ಯೆಗೂ ಕೊಟ್ಟಿರುವ ಸಂಖ್ಯೆಗೂ ಇರುವ ವ್ಯತ್ಯಾಸವು _______

i) 1,980 ii) 9,990
iii) 990 iv) 1,890

(11) 6 ಅಂಕೆಯ ಅತೀ ದೊಡ್ಡ ಸಂಖ್ಯೆಗೂ 5 ಅಂಕೆಯ ಅತೀ ಸಣ್ಣ ಸಂಖ್ಯೆಗೂ ಇರುವ ವ್ಯತ್ಯಾಸವು _______.

i) 89,999 ii) 9,89,999
iii) 10,000 iv) 1,00,999

(12) 405 ಮತ್ತು 40 ರ ಗುಣಲಬ್ಧವು _______.


i) 445 ii) 16,200
Iii) 1,620 iv) 1,800

(13) 7427 ನ್ನು 7 ರಿಂದ ಭಾಗಿಸಿದಾಗ ಬರುವ ಭಾಗಲಬ್ಧವು _______.

i) 161 ii) 1,061
iii) 1,006 iv) 1,001

# 4 ಅಳತೆಗಳು

ರಾಮು ಹಾಲಿನ ಸಂಗ್ರಹಾಲಯದಲ್ಲಿ ತನ್ನ ತಂದೆಗೆ ಸಹಾಯ ಮಾಡುತ್ತಿದ್ದಾನೆ. ಹಾಲಿನ ವಿವಿಧ ಪ್ರಮಾಣಗಳನ್ನು ಅಳೆಯಲು ಅವನು ಉಪಯೋಗಿಸುವ ಪಾತ್ರೆಗಳು ಈ ಕೆಳಗಿನಂತೆ ಇವೆ. ಅವು,




1 ಲೀಟರ್ (ಲೀ) ಪಾತ್ರೆಯು 500 ಮಿಲಿ ಲೀಟರ್ (ಮಿ.ಲೀ) ಪಾತ್ರೆಗಿಂತ ದೊಡ್ಡದಾಗಿದೆ ಎಂದು ರಾಮುವಿಗೆ ಗೊತ್ತಿದ್ದರೂ ಇವೆರಡರ ನಡುವಿನ ಸಂಬಂಧವನ್ನು ತಿಳಿಯಬೇಕೆಂದು ಅವನಿಗೆ ಆಸೆ. ಅವನು 500 ಮಿ.ಲೀ ನ ಜಾಡಿಯಲ್ಲಿ ಹಾಲನ್ನು ಸುರಿಯಲು ಆರಂಭಿಸಿದನು. ಆ ಜಾಡಿಯಲ್ಲಿ ಹಾಲು 500 ಮಿ.ಲೀ ಗೆರೆಯ ತನಕ ಬರುವಂತೆ ಹಾಲನ್ನು ಸುರಿದನು. ಬಳಿಕ ಆ ಹಾಲನ್ನು 1 ಲೀಟರ್‌ನ ಪಾತ್ರೆಗೆ ಸುರಿದನು. ಆದರೆ ಆ 1 ಲೀಟರ್‌ನ ಪಾತ್ರೆ ತುಂಬಲಿಲ್ಲ ಎಂಬುದನ್ನು ತಿಳಿದುಕೊಂಡನು.



ಆದುದರಿಂದ ಅವನು ಪುನಃ 500 ಮಿ.ಲೀ ನಪಾತ್ರೆಯಿಂದ ಮತ್ತೊಂದು ಸಲ ಹಾಲನ್ನು ಆ 1 ಲೀಟರ್‌ನ ಪಾತ್ರೆಗೆ ಸುರಿದನು. ಆಗ ಆ ಪಾತ್ರೆಯಲ್ಲಿ ಹಾಲು ಮೇಲೇರಿ 1 ಲೀಟರ್ ಎಂಬ ಗುರುತನ್ನು ತಲುಪಿದುದನ್ನು ಗಮನಿಸಿದನು.ಈ ಮೂಲಕ ನಾವು ತಿಳಿಯುವುದೇನೆಂದರೆ



1 ಲೀ =500 ಮಿ.ಲೀ + 500 ಮಿ.ಲೀ = 1000 ಮಿ.ಲೀ

**1ಲೀ = 1000 ಮಿ.ಲೀ**

ಇದೇ ರೀತಿ 200 ಮಿ.ಲೀ, 100 ಮಿ.ಲೀ ನ ಪಾತ್ರೆಗಳನ್ನು ಉಪಯೋಗಿಸಿ ಮೇಲಿನ ಚಟುವಟಿಕೆಯನ್ನು ಮಾಡಿರಿ. ಅವುಗಳ ಅಳತೆಯಲ್ಲಿರುವ ವ್ಯತ್ಯಾಸವನ್ನು ಹೋಲಿಸಿರಿ.

ಲೀಟರ್ ಗಳನ್ನು ಮಿಲಿ ಲೀಟರ್ ಮತ್ತು ಮಿಲಿ ಲೀಟರ್‌ಗಳನ್ನು ಲೀಟರ್‌ಗಳಾಗಿ ಪರಿವರ್ತಿಸುವಿಕೆ

X1000

| ಲೀ | ಮಿ.ಲೀ |
|---|---|

÷1000


ಲೀಟರ್‌ಗಳನ್ನು ಮಿಲಿ ಲೀಟರ್‌ಗಳಾಗಿ ಪರಿವರ್ತಿಸುವುದು

**ಲೀಟರ್‌ಗಳನ್ನು ಮಿಲಿ ಲೀಟರ್‌ಗಳಾಗಿ ಪರಿವರ್ತಿಸಲು ಲೀಟರ್‌ಗಳನ್ನು 1000 ದಿಂದ ಗುಣಿಸಬೇಕು.**




2 ಲೀಟರ್‌ಗಳನ್ನು ಮಿಲಿ ಲೀಟರ್‌ಗೆ ಪರಿವರ್ತಿಸಿ

2 ಲೀ = 2 x 1000 = 2000 ಮಿ.ಲೀ



**ಅಭ್ಯಾಸದ ವೇಳೆ**

ಕೋಷ್ಟಕವನ್ನು ಪೂರ್ತಿಗೊಳಿಸಿ.

| ಲೀಟರ್ (ಲೀ) | 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|---|
| ಮಿ.ಲೀ | 1000 | 2000 | 3000 | 4000 | | | | | |




2 ಲೀ 250 ಮಿ.ಲೀ ಗಳನ್ನು ಮಿಲಿ ಲೀಟರ್‌ಗಳಾಗಿ ಪರಿವರ್ತಿಸಿ.

2 ಲೀ 250 ಮಿ.ಲೀ = 2 ಲೀ + 250 ಲೀ

= (2 1000) ಮಿ.ಲೀ + 250 ಮಿ.ಲೀ

= 2000 ಮಿ.ಲೀ + 250 ಮಿ.ಲೀ

= 2250 ಮಿ.ಲೀ.




5 ಲೀ 50 ಮಿ.ಲೀ ನ್ನು ಮಿಲಿ ಲೀಟರ್‌ಗಳಲ್ಲಿ ಪರಿವರ್ತಿಸಿರಿ.

5 ಲೀ 50 ಮಿ.ಲೀ = 5ಲೀ+ 50 ಮಿ.ಲೀ

= (5 X 1000) ಮಿ.ಲೀ + 50 ಮಿ.ಲೀ

= 5000ಮಿ.ಲೀ + 50 ಮಿ.ಲೀ

= 5050 ಮಿ.ಲೀ



**ಇವುಗಳನ್ನು ಮಾಡಲು ಪ್ರಯತ್ನಿಸಿ**

ಕೆಳಗಿನ ಮೌಲ್ಯಗಳನ್ನು ಮಿಲಿ ಲೀಟರ್‌ಗಳಲ್ಲಿ ಪರಿವರ್ತಿಸಿರಿ.

i. 3ಲೀ ii. 1ಲೀ 500 ಮಿ.ಲೀ

iii. 8 ಲೀ iv. 6ಲೀ 200 ಮಿ.ಲೀ

v. 10ಲೀ vi. 7ಲೀ 50 ಮಿ.ಲೀ

vii. 25 ಲೀ viii. 9ಲೀ 100 ಮಿ.ಲೀ

## ಮಿಲಿ ಲೀಟರ್‌ಗಳನ್ನು ಲೀಟರ್‌ಗಳಾಗಿ ಪರಿವರ್ತಿಸುವಿಕೆ


**ಮಿಲಿ ಲೀಟರ್‌ಗಳನ್ನು ಲೀಟರ್‌ಗಳಾಗಿ ಪರಿವರ್ತಿಸಲು ಮಿಲಿ ಲೀಟರ್‌ಗಳನ್ನು 1000 ದಿಂದ ಭಾಗಿಸಬೇಕು.**




3000 ಮಿ.ಲೀ ಗಳನ್ನು ಲೀಟರ್‌ಗಳಲ್ಲಿ ಪರಿವರ್ತಿಸಿರಿ.

3000 ಮಿ.ಲೀ = 3000 ÷ 1000

= 3 ಲೀ.



**ಅಭ್ಯಾಸದ ವೇಳೆ**

ಈ ಕೋಷ್ಟಕವನ್ನು ಪೂರ್ತಿಗೊಳಿಸಿರಿ.

| ಮಿ. ಲೀ | 1000 | 2000 | 3000 | 4000 | 5000 | 6000 | 7000 | 8000 | 9000 |
|---|---|---|---|---|---|---|---|---|---|
| ಲೀ | 1 | 2 | 3 | 4 | | | | | |




**3150ಮಿ.ಲೀಗಳನ್ನು ಲೀಟರ್‌ಗಳು ಮತ್ತು ಮಿಲಿ ಲೀಟರ್‌ಗಳಾಗಿ ಪರಿವರ್ತಿಸಿರಿ.**

3150ಮಿ.ಲೀ =3000ಮಿ.ಲೀ+150ಮಿ.ಲೀ

=(3000 _ 1000)ಲೀ+150ಮಿ.ಲೀ

=3 ಲೀ 150 ಮಿ.ಲೀ

**4500 ಮಿ.ಲೀಗಳನ್ನು ಲೀಟರ್ ಮತ್ತು ಮಿಲಿ ಲೀಟರ್ ಗಳಾಗಿ ಪರಿವರ್ತಿಸಿರಿ.**

4500 ಮಿ.ಲೀ = 4000ಮಿ.ಲೀ +500 ಮಿ.ಲೀ

= (4000 _1000)ಲೀ +500ಮಿ.ಲೀ

=4 ಲೀ 500 ಮಿ.ಲೀ



**ಇವುಗಳನ್ನು ಮಾಡಲು ಪ್ರಯತ್ನಿಸಿ**

**ಕೆಳಗಿನವುಗಳನ್ನು ಲೀಟರ್‌ಗಳಲ್ಲಿ ಮತ್ತು ಮಿಲಿ ಲೀಟರ್‌ಗಳಲ್ಲಿ ಪರಿವರ್ತಿಸಿರಿ.**

I. 3500 ಮಿ.ಲೀ ii. 4150 ಮಿ.ಲೀ iii. 5500 ಮಿ.ಲೀ

iv. 6200 ಮಿ.ಲೀ v. 9050 ಮಿ.ಲೀ vi. 9250 ಮಿ.ಲೀ

## ಸಂಕಲನ

ಮೀರ, ಗೀತ ಮತ್ತು ಪ್ರಿಯ ಅಂಗಡಿಗೆ ಹೋಗಿ ಕೆಳಗಿನ ವಸ್ತುಗಳನ್ನು ಕೊಂಡುಕೊಂಡ ಬಳಿಕ, ಅವುಗಳ ಪಟ್ಟಿಯನ್ನು ಈ ರೀತಿ ಮಾಡಿದರು.

| ಹೆಸರು | ವಸ್ತುಗಳು | | | |
|---|---|---|---|---|
| | ಹಾಲು | ತೆಂಗಿನ ಎಣ್ಣೆ | ನೆಲಕಡಲೆ ಎಣ್ಣೆ | ಸೂರ್ಯಕಾಂತಿ ಎಣ್ಣೆ |
| ಮೀರ | 2 ಲೀ 500 ಮಿ.ಲೀ | 500 ಮಿ.ಲೀ | 3ಲೀ.250ಮಿ.ಲೀ | 2 ಲೀ |
| ಗೀತ | 1 ಲೀ 500 ಮಿ.ಲೀ | 2 ಲೀ | 1 ಲೀ | 500 ಮಿ.ಲೀ |
| ಪ್ರಿಯ | 500 ಮಿ.ಲೀ | 500 ಮಿ.ಲೀ | 1 ಲೀ 500 ಮಿ.ಲೀ | 1 ಲೀ |
| ಮೊತ್ತ | | | | |

ಮೇಲಿನ ಪಟ್ಟಿಯಲ್ಲಿ ತಿಳಿಸಿದಂತೆ ನಾವೀಗ, ಅವರೆಲ್ಲರೂ ಸೇರಿ ಕೊಂಡುಕೊಂಡ ಒಟ್ಟು ಹಾಲೆಷ್ಟೆಂದು ಲೆಕ್ಕ ಮಾಡೋಣ.

| | ಲೀ | ಮಿ.ಲೀ |
|---|---|---|
| ಮೀರಾಳು ಕೊಂಡುಕೊಂಡ ಹಾಲು = | 2 | 500 |
| ಗೀತಾಳು ಕೊಂಡುಕೊಂಡ ಹಾಲು = | 1 | 500 |
| ಪ್ರಿಯ ಕೊಂಡುಕೊಂಡ ಹಾಲು = + | 0 | 500 |
| | 3 | 1500 |

ಅವರು ಕೊಂಡುಕೊಂಡ ಹಾಲನ್ನು ಒಂದರ ಕೆಳಗೆ ಮತ್ತೊಂದರಂತೆ ಲೀ. ಮತ್ತು ಮಿ.ಲೀ ಗಳನ್ನು ಬರೆದು ಬಳಿಕ ಅವೆಲ್ಲವನ್ನು ಕೂಡಿಸಬೇಕು.

3ಲೀ1500ಮಿ.ಲೀ =3ಲೀ+(1500ಮಿ.ಲಿ ÷1000)=3ಲೀ+(1ಲೀ500 ಮಿ.ಲೀ)=4ಲೀ500ಮಿ.ಲೀ

ಆದುದರಿಂದ ಮೂವರು ಕೊಂಡುಕೊಂಡ ಒಟ್ಟು ಹಾಲು = 4ಲೀ 500 ಮಿ.ಲೀ



## ಚಟುವಟಿಕೆ

ಕೊಡಲಾದ ಆ ಪಟ್ಟಿಯ ಸಹಾಯದಿಂದ ಆ ಮೂವರು ಗೆಳತಿಯರು ಕೊಂಡುಕೊಂಡ ಒಟ್ಟು ತೆಂಗಿನ ಎಣ್ಣೆ, ನೆಲಕಡಲೆ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆ ಎಷ್ಟೆಂದು ಕಂಡು ಹಿಡಿಯಿರಿ.






**12 ಲೀ 250 ಮಿ.ಲೀ ಮತ್ತು 34 ಲೀ 800ಮಿ.ಲೀ ಗಳನ್ನು ಕೂಡಿಸಿರಿ.**

| | ಲೀ | ಮಿ.ಲೀ |
|---|---|---|
| | 12 | 250 |
| + | 34 | 800 |
| | 47 | 050 |

ಮಿಲಿ ಲೀಟರ್ ಗಳನ್ನು ಮೊದಲು ಕೂಡಿಸಿರಿ.
250ಮಿ.ಲೀ + 800 ಮಿ.ಲೀ = 1050 ಮಿ.ಲೀ.
ಅವುಗಳನ್ನು ಲೀ ಮತ್ತು ಮಿ.ಲೀಟರ್‌ಗಳಲ್ಲಿ ಪರಿವರ್ತಿಸಿರಿ.
1050 ಮಿ.ಲೀ – 1ಲೀ 050 ಮಿ.ಲೀ ಬಳಿಕ ಲೀಟರ್ ಗಳನ್ನು ಕೂಡಿಸಿರಿ.
1+12+34=47 ಲೀ.



### ಇವುಗಳನ್ನು ಮಾಡಲು ಪ್ರಯತ್ನಿಸಿ

ಕೆಳಗಿನವುಗಳನ್ನು ಕೂಡಿಸಿರಿ.

i. 3ಲೀ 250 ಮಿ.ಲೀ,6ಲೀ 150 ಮಿ.ಲೀ
ii. 7ಲೀ 850 ಮಿ.ಲೀ, 9ಲೀ 300 ಮಿ.ಲೀ
iii. 5ಲೀ 550 ಮಿ.ಲೀ,3ಲೀ 300 ಮಿ.ಲೀ
iv. 85ಲೀ 450 ಮಿ.ಲೀ, ಮತ್ತು 70ಲೀ 350 ಮಿ.ಲೀ
V. 20ಲೀ 500 ಮಿ.ಲೀ ಮತ್ತು 35ಲೀ600 ಮಿ.ಲೀ
vi. 45ಲೀ 600 ಮಿ.ಲೀ ಮತ್ತು 20ಲೀ 500 ಮಿ.ಲೀ

## ವ್ಯವಕಲನ

ಒಂದು ಪೀಪಾಯಿ (ಬ್ಯಾರೆಲ್) 40 ಲೀಟರ್‌ನಷ್ಟು ನೀರು ಹಿಡಿಯುತ್ತದೆ. ಒಂದು ಬಕೆಟು 5 ಲೀಟರ್ ನಷ್ಟು ನೀರು ಹಿಡಿಯುತ್ತದೆ. ಜೀನನು ಆ ಪೀಪಾಯಿಯ ತುಂಬ ನೀರನ್ನು ತುಂಬಿಸಿ ಅದರಿಂದ ಒಂದು ಬಕೆಟು ನೀರನ್ನು ತೆಗೆದು ಗಿಡಗಳಿಗೆ ಸುರಿದನು. ಹಾಗಾದರೆ ಈಗ ಆ ಪೀಪಾಯಿಯಲ್ಲಿ ಉಳಿದಿರುವ ನೀರೆಷ್ಟೆಂದು ನೀವು ಹೇಳಬಲ್ಲಿರಾ?

ಪೀಪಾಯಿಯಲ್ಲಿ ತುಂಬಬಲ್ಲ ನೀರಿನ ಅಳತೆ = 40ಲೀ

ಗಿಡಗಳಿಗಾಗಿ ಉಪಯೋಗಿಸಿದ ನೀರಿನ ಅಳತೆ (ಪ್ರಮಾಣ)= - 5ಲೀ

ಪೀಪಾಯಿಯಲ್ಲಿ ಉಳಿದಿರುವ ನೀರಿನ ಪ್ರಮಾಣ = 35ಲೀ.

ಈಗ ಆ ಪೀಪಾಯಿಯಲ್ಲಿ 35 ಲೀಟರ್ ಗಳಷ್ಟು ನೀರು ಉಳಿದಿದೆ.



**ಶಿಕ್ಷಕರಿಗೆ ಸೂಚನೆ:**
ಇದೇ ರೀತಿ ಇನ್ನೂ ಕೆಲವು ಲೆಕ್ಕಗಳನ್ನು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಕೊಡಬಹುದು.




**75 ಲೀ 200 ಮಿ.ಲೀ ನಿಂದ 56 ಲೀ 350 ಮಿ.ಲೀನ್ನು ಕಳೆಯಿರಿ.**

| | | |
|---|---|---|
| | 74 | 1200 |
| | ~~75~~ | ~~200~~ |
| – | 56 | 350 |
| | 18 | 850 |

350 ಮಿ.ಲೀನ್ನು 200ಮಿ.ಲೀ ನಿಂದ ಕಳೆಯಬೇಕಾಗಿದ್ದರೆ ಮೊದಲು 1 ಲೀ ನ್ನು ಮಿ.ಲೀ ಗಳಾಗಿ ಬದಲಾಯಿಸಿ, ಅಲ್ಲಿರುವ ಮಿ.ಲೀ ನ್ನು ಅದರೊಂದಿಗೆ ಸೇರಿಸಿರಿ.

75ಲೀ - 1ಲೀ =74ಲೀ

1000 ಮಿ.ಲೀ + 200 ಮಿ.ಲೀ.=1200 ಮಿ.ಲೀ

1200 ಮಿ.ಲೀ - 350 ಮಿ.ಲೀ.=850 ಮಿ.ಲೀ

75ಲೀ ನಿಂದ 56 ಲೀ ನ್ನು ಕಳೆಯಿರಿ.

75ಲೀ - 56ಲೀ = 18 ಲೀ



**ಇವುಗಳನ್ನು ಮಾಡಲು ಪ್ರಯತ್ನಿಸಿ**

**ಕೆಳಗಿನವುಗಳನ್ನು ಕಳೆಯಿರಿ.**

I. 5ಲೀ 250 ಮಿ.ಲೀ – 2ಲೀ 150 ಮಿ.ಲೀ.

ii. 9ಲೀ 200 ಮಿ.ಲೀ – 3ಲೀ 150 ಮಿ.ಲೀ.

iii. 9ಲೀ 500 ಮಿ.ಲೀ – 7ಲೀ 600 ಮಿ.ಲೀ.

iv. 14ಲೀ 150 ಮಿ.ಲೀನ್ನು 17ಲೀ 450 ಮಿ.ಲೀ ನಿಂದ ಕಳೆಯಿರಿ.

v. 34ಲೀ 400 ಮಿ.ಲೀನ್ನು 84ಲೀ 600 ಮಿ.ಲೀ ನಿಂದ ಕಳೆಯಿರಿ.

vi. 32ಲೀ 800 ಮಿ.ಲೀನ್ನು 55ಲೀ 750 ಮಿ.ಲೀ ನಿಂದ ಕಳೆಯಿರಿ.

## ಗುಣಾಕಾರ



ಜಾನ್ ಎಂಬವನು ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಒಂದೊಂದು ಲೋಟ ಹಾಲನ್ನು ಕುಡಿಯುತ್ತಾನೆ.ಆ ಲೋಟದಲ್ಲಿ 200 ಮಿ.ಲೀ ನಷ್ಟು ಹಾಲು ಹಿಡಿಯುತ್ತದೆ. ಹಾಗಾದರೆ ಅವನು ಒಂದು ದಿನಕ್ಕೆ ಎಷ್ಟು ಹಾಲನ್ನು ಕುಡಿಯುತ್ತಾನೆ.

ಒಚಿದು ಲೋಟದಲ್ಲಿ ಹಿಡಿಸುವ ಹಾಲು = 200 ಮಿ.ಲೀ

ಅವನು ಕುಡಿಯುವ ಲೋಟಗಳ ಸಂಖ್ಯೆ = x 2

ಅವನು ಒಂದು ದಿನದಲ್ಲಿ ಕುಡಿಯುವ ಹಾಲಿನ ಪ್ರಮಾಣ = 400 ಮಿ.ಲೀ

ಆದುದರಿಂದ ಅವನು ಒಂದು ದಿನದಲ್ಲಿ ಒಟ್ಟು 400ಮಿ.ಲೀನಷ್ಟು ಹಾಲನ್ನು ಕುಡಿಯುತ್ತಾನೆ.




**3 ಲೀ 150 ಮಿ.ಲೀ ನ್ನು 4 ರಿಂದ ಗುಣಿಸಿರಿ.**

| ಲೀ | ಮಿ.ಲೀ |
|---|---|
| 3 | 150 |
| x | 4 |
| 12ಲೀ | 600 ಮಿ.ಲೀ |

| | ಲೀ | ಮಿ.ಲೀ |
|---|---|---|
| 150ಮಿ.ಲೀ x 4 = | | 600 |
| 3ಲೀ x 4 =12 | | |
| | 12 | 600 |

**48 ಲೀ 200 ಮಿ.ಲೀ ನ್ನು 7 ರಿಂದ ಗುಣಿಸಿರಿ**

| ಲೀ | ಮಿ.ಲೀ |
|---|---|
| 1<br>48 | 200 |
| x | 7 |
| 337ಲೀ | 400 ಮಿ.ಲೀ |

| | ಲೀ | ಮಿ.ಲೀ |
|---|---|---|
| 200ಮಿ.ಲೀ x 7 = | | 1400 |
| 48ಲೀ x 7 =336 | | |
| | 337 | 400 |



**ಇವುಗಳನ್ನು ಮಾಡಲು ಪ್ರಯತ್ನಿಸಿ**

**ಕೆಳಗಿನ ಗುಣಾಕಾರ ಲೆಕ್ಕಗಳನ್ನು ಮಾಡಿರಿ.**

i. 7ಲೀ 350 ಮಿ.ಲೀ ನ್ನು 2ರಿಂದ
ii. 55ಲೀ 400 ಮಿ.ಲೀ ನ್ನು 5 ರಿಂದ
iii. 35ಲೀ 300 ಮಿ.ಲೀ ನ್ನು 6 ರಿಂದ
iv. 8ಲೀ 400 ಮಿ.ಲೀ ನ್ನು 7 ರಿಂದ
v. 9ಲೀ 500 ಮಿ.ಲೀ ನ್ನು 8 ರಿಂದ
vi. 18ಲೀ 200 ಮಿ.ಲೀ ನ್ನು 9 ರಿಂದ

## ಭಾಗಾಕಾರ

ಶ್ರೀಮತಿ ಲಕ್ಷ್ಮಿಯು 400 ಮಿಲೀ ಹಣ್ಣಿನ ರಸವನ್ನು ಅವಳ ಮಕ್ಕಳಿಗಾಗಿ ತಯಾರಿಸಿದಳು. ಅದನ್ನು ಇಬ್ಬರಿಗೆ ಸಮನಾಗಿ ಹಂಚಿದರೆ ಪ್ರತಿಯೊಬ್ಬರು ಪಡೆಯುವ ಹಣ್ಣಿನ ರಸ ಎಷ್ಟು?



ತಾಯಿಯು ತಯಾರಿಸಿದ ಹಣ್ಣಿನ ರಸದ ಪ್ರಮಾಣ= 400 ಮಿ.ಲೀ

ಮಕ್ಕಳ ಸಂಖ್ಯೆ = 2

ಪ್ರತಿಯೊಬ್ಬರಿಗೆ ದೊರೆತ ಹಣ್ಣಿನ ರಸ = 400 ÷ 2

= 200 ಮಿ.ಲೀ

```
   200
2)400
 - 400
    00
     0
     0
     0
     0
```




ಆದುದರಿಂದ ಪ್ರತಿಯೊಬ್ಬರು 200 ಮಿ.ಲೀನಷ್ಟು ಹಣ್ಣಿನ ರಸವನ್ನು ಪಡೆದರು.

**4 ಲೀ 640 ಮಿ.ಲೀ ನ್ನು 4 ರಿಂದ ಭಾಗಿಸಿರಿ.**

```
   1   160
4)4   640
 - 4
   0  6
    - 4
       24
     - 24
       000
         0
         0
```

**4 ಲೀ 640 ಮಿ.ಲೀ÷ 4=1 ಲೀ 160 ಮಿ.ಲೀ**

**64ಲೀ 320 ಮಿ.ಲೀ 8**

```
   8   040
8)64   320
 - 64
    0  32
     - 32
       000
         0
         0
```

**64ಲೀ 320 ಮಿ.ಲೀ÷ 8=8 ಲೀ 040 ಮಿ.ಲೀ**




**74 ಲೀ 440 ಮಿ.ಲೀ ನ್ನು 8 ರಿಂದ ಭಾಗಿಸಿರಿ**

ಹಂತ 1: 74 ಲೀ 8 ಭಾಗಿಸಿದಾಗ = 9 ಲೀ, ಶೇಷ 2ಲೀಟರ್‌ಗಳು.
1 ಲೀ =1000 ಮಿ.ಲೀ ಎಂಬುದು ನಮಗೆ ತಿಳಿದಿದೆ,
ಆದುದರಿಂದ 2ಲೀ = 2000 ಮಿ.ಲೀ

9
8 )74
72
2

ಹಂತ 2 : 2000 ಮಿ.ಲೀ ಮತ್ತು 440 ಮಿ.ಲೀ ನ್ನು ಸೇರಿಸಿದಾಗ ನಮಗೆ 2440 ಮಿ.ಲೀ ದೊರೆಯುತ್ತದೆ.

ಹಂತ 3 : 2440 ಮಿ.ಲೀ ನ್ನು 8 ರಿಂದ ಭಾಗಿಸಿದಾಗ ನಮಗೆ 305 ಮಿ.ಲೀ ದೊರೆಯುತ್ತದೆ.
ಆದುದರಿಂದ ಈ ಲೆಕ್ಕದ ಉತ್ತರವು 9 ಲೀ 305 ಮಿ.ಲೀ.


305
8)2440
-24
04
0
40
-40
00



**ಇವುಗಳನ್ನು ಮಾಡಲು ಪ್ರಯತ್ನಿಸಿ**

**ಕೆಳಗಿನವುಗಳನ್ನು ಭಾಗಿಸಿರಿ.**

I. 36ಲೀ 480 ಮಿ.ಲೀ ÷ 6
ii. 21ಲೀ 420 ಮಿ.ಲೀ ÷ 7
iii. 40ಲೀ 720 ಮಿ.ಲೀ ÷ 8
iv. 81ಲೀ 540 ಮಿ.ಲೀ ÷ 9
v. 42ಲೀ 980 ಮಿ.ಲಿ ÷ 14
vi. 24ಲೀ 600 ಮಿ.ಲೀ ÷ 12



**ಅಭ್ಯಾಸದ ವೇಳೆ**

1. ದೀಪ್ತಿಯು ಮೊದಲನೇ ಬಾಟಲಿಯಲ್ಲಿ 350ಮಿ.ಲೀ ಹಣ್ಣಿನ ರಸವನ್ನು ಸುರಿದಳು. ಎರಡನೇ ಬಾಟಲಿಯಲ್ಲಿ 750 ಮಿ.ಲೀ ನಷ್ಟು ಹಣ್ಣಿನ ರಸವನ್ನು ಸುರಿದಳು. ಹಾಗಾದರೆ ಅವಳು ಒಟ್ಟು ಎಷ್ಟು ಪ್ರಮಾಣದ ಹಣ್ಣಿನ ರಸವನ್ನು ಸುರಿದಳು?
2. ಒಂದು ಪೆಟ್ರೋಲ್ ಪಂಪ್ ನಿಂದ 15 ಲೀ 500 ಮಿ.ಲೀ 20 ಲೀ 100 ಮಿ.ಲೀ ಮತ್ತು 50 ಲೀ 200 ಮಿ.ಲೀ ನಷ್ಟು ಪೆಟ್ರೋಲನ್ನು ಮೂರು ಜನರಿಗೆ ಮಾರಿದರೆ, ಅಂದು ಮಾರಿದ ಒಟ್ಟು ಪೆಟ್ರೋಲು ಎಷ್ಟೆಂದು ಕಂಡು ಹಿಡಿಯಿರಿ?
3. ಒಬ್ಬ ವ್ಯಾಪಾರಿಯು 50 ಲೀ 500 ಮಿ.ಲೀ ಸೂರ್ಯಕಾಂತಿ ಮತ್ತು 35 ಲೀ 500 ಮಿ.ಲೀ ತೆಂಗಿನ ಎಣ್ಣೆಯನ್ನು ಮಾರಿದರೆ, ಅವನು ಅಂದು ಒಟ್ಟು ಎಷ್ಟು ಲೀಟರ್ ಎಣ್ಣೆಯನ್ನು ಮಾರಿದನು ಎಂದು ಕಂಡುಹಿಡಿಯಿರಿ?

4. ಡೇವಿಡ್ 20 ಲೀಟರ್ ಪೈಯಿಂಟ್ ನ್ನು ಕೊಂಡು ಕೊಂಡನು. ಅವನು ಮನೆಗೆ ಪೈಂಟ್ ಹಚ್ಚಿದ ಬಳಿಕ 4 ಲೀ ಪೈಯಿಂಟ್ ಉಳಿದರೆ ಅವನು ಉಪಯೋಗಿಸಿದ ಪೈಯಿಂಟ್ ಎಷ್ಟು?

5. ಒಂದು ಎಣ್ಣೆಯ ಡಬ್ಬದಲ್ಲಿ 60 ಲೀ ಎಣ್ಣೆ ತುಂಬುವುದು. ಅದರಿಂದ 22 ಲೀ 500 ಮಿ.ಲೀ ನಷ್ಟು ಎಣ್ಣೆಯನ್ನು ಹೊರ ತೆಗೆದರೆ ಅದರಲ್ಲಿ ಉಳಿಯುವ ಎಣ್ಣೆ ಎಷ್ಟೆಂದು ಕಂಡು ಹಿಡಿಯಿರಿ.

6. ಶ್ವೇತಳು ಒಂದು ದಿನ2ಲೀ 500ಮಿ.ಲೀ ಹಾಲನ್ನು ಪಡೆದುಕೊಂಡಳು. ಅಂದು ಅವಳು 2ಲೀ 200ಮಿ.ಲೀ ಹಾಲನ್ನು ಖರ್ಚು ಮಾಡಿದರೆ ಅವಳಲ್ಲಿ ಉಳಿಯುವ ಹಾಲೆಷ್ಟು?

7 ಒಂದು ಕಟ್ಟಡದ ಮಹಡಿಯ ಮೇಲ್ಭಾಗದಲ್ಲಿ ಎರಡು ನೀರಿನ ತೊಟ್ಟಿಗಳಿವೆ. ಒಂದು ತೊಟ್ಟಿಯಲ್ಲಿ 80ಲೀ ನೀರು ಹಿಡಿಯುತ್ತದೆ. ಮತ್ತೊಂದರಲ್ಲಿ 90ಲೀ ನೀರು ಹಿಡಿಯುತ್ತದೆ. ಹಾಗಾದರೆ ಮೊದಲನೇ ತೊಟ್ಟಿಗಿಂತ ಎರಡನೇ ತೊಟ್ಟಿಯಲ್ಲಿ ಎಷ್ಟು ಲೀಟರ್ ನೀರು ಅಧಿಕವಾಗಿ ಹಿಡಿಯುವುದೆಂದು ಕಂಡು ಹಿಡಿಯಿರಿ.

8. ಒಂದು ಹೂಜಿನಲ್ಲಿ (ಜಾರ್) 150 ಮಿ.ಲೀ ನಷ್ಟು ನೀರು ತುಂಬುವುದು. ಅಂತಹ 4 ಹೂಜಿಗಳಲ್ಲಿ ಒಟ್ಟು ಎಷ್ಟು ನೀರು ತುಂಬುವುದೆಂದು ಕಂಡು ಹಿಡಿಯಿರಿ.

9. ಒಂದು ಕ್ಯಾನ್ ನಲ್ಲಿ 3 ಲೀ 500 ಮಿ.ಲೀ ನಷ್ಟು ಪೆಟ್ರೋಲನ್ನು ತುಂಬಿಸಬಹುದು. ಅಂತಹ 8 ಕ್ಯಾನ್ ಗಳಲ್ಲಿ ಒಟ್ಟು ಎಷ್ಟು ಪೆಟ್ರೋಲನ್ನು ತುಂಬಿಸಬಹುದು?

10. ಒಂದು ಫ್ಲಾಸ್ಕ್ ನಲ್ಲಿ 1 ಲೀ 500 ಮಿ.ಲೀ ನಷ್ಟು ದ್ರವವನ್ನು ತುಂಬಿಸಬಹುದು. ಹಾಗಾದರೆ ಅಂತಹ 9 ಫ್ಲಾಸ್ಕ್ ಗಳಲ್ಲಿ ಒಟ್ಟು ಪ್ರಮಾಣದ ದ್ರವವನ್ನು ತುಂಬಿಸಬಹುದು?

11. ಗೀತಳು 500 ಮಿ.ಲೀ ಹಾಲನ್ನು ಸಮನಾಗಿ 4 ಬಾಟಲಿಗಳಲ್ಲಿ ತುಂಬಿಸುತ್ತಾಳೆ. ಹಾಗಾದರೆ ಪ್ರತಿಯೊಂದು ಬಾಟಲಿಯಲ್ಲಿ ಅವಳು ತುಂಬಿಸಿದ ಹಾಲೆಷ್ಟು?

12. ಒಂದು ಪೀಪಾಯಿಯಲ್ಲಿ 24 ಲೀ ನಷ್ಟು ನೀರನ್ನು ತುಂಬಿಸಬಹುದು. ಆ ನೀರನ್ನು 4 ಬಾಲ್ದಿಗಳಲ್ಲಿ (ಬಕೆಟ್) ಸಮನಾಗಿ ಸುರಿದರೆ ಪ್ರತಿಯೊಂದು ಬಕೆಟ್ ನಲ್ಲಿ ತುಂಬುವ ನೀರೆಷ್ಟು?

13 1ಕ್ಯಾನ್ ನಲ್ಲಿ 10 ಲೀ 500 ಮಿ.ಲೀ ನಷ್ಟು ಸೀಮೆ ಎಣ್ಣೆಯಿದೆ. ಅದನ್ನು 5 ಬಾಟಲಿಗಳಲ್ಲಿ ಸಮನಾಗಿ ಸುರಿದರೆ, ಪ್ರತಿಯೊಂದು ಬಾಟಲಿಯಲ್ಲಿ ಸುರಿದ ಸೀಮೆ ಎಣ್ಣೆ ಎಷ್ಟು?

14. ಮೀರಾಳು ತನ್ನ 6 ಗೆಳತಿಯರಿಗೆಂದು 7 ಲೀ 200 ಮಿ.ಲೀ ನಿಂಬೆ ಹಣ್ಣಿನ ಸರ್‌ಬತ್‌ನ್ನು ತಯಾರಿಸಿ ಅವರಿಗೆ ಸಮನಾಗಿ ಹಂಚಿದಳು. ಹಾಗಾದರೆ ಅವಳ ಪ್ರತಿಯೊಬ್ಬ ಗೆಳತಿಗೆ ದೊರೆತ ಸರ್‌ಬತ್ ಎಷ್ಟೆಂದು ಕಂಡು ಹಿಡಿಯಿರಿ.





1. ನೀನು ಒಂದೊಂದು ಚಟುವಟಿಕೆಯ (ಕೆಲಸದ) ಬಳಿಕ ಎಷ್ಟು ಲೋಟಗಳಷ್ಟು ನೀರನ್ನು ಕುಡಿಯುವೆ? ಈ ರೀತಿ ನೀನು ಒಂದು ದಿನ ಕುಡಿದ ನೀರಿನ ಪ್ರಮಾಣವನ್ನು ಮಿ.ಲೀ ಅಥವಾ ಲೀಟರ್‌ಗಳಲ್ಲಿ ತಿಳಿಸಿ ಈ ಕೆಳಗಿನ ಪಟ್ಟಿಯನ್ನು ತುಂಬು.

| ಚಟುವಟಿಕೆ | ನೀರಿನ ಲೋಟಗಳ ಸಂಖ್ಯೆ | ಮಿ.ಲೀ / ಲೀ |
|---|---|---|
| | | |
| | | |
| | | |
| | | |
| | | |
| | | |
| | | |

2. ಪ್ರತಿಯೊಂದು ದಿನ ನೀನು ಕುಡಿಯಬೇಕಾದ ನೀರೆಷ್ಟೆಂದು ಡಾಕ್ಟರರಲ್ಲಿ ಕೇಳಿ ತಿಳಿದುಕೊ, ನೀನು ಇನ್ನೆಷ್ಟು ಹೆಚ್ಚು ನೀರನ್ನು ಅಥವಾ ಇನ್ನೆಷ್ಟು ಕಡಿಮೆ ನೀರನ್ನು ಉಪಯೋಗಿಸಬೇಕೆಂದು ಅದರೊಂದಿಗೆ ಹೋಲಿಸಿ ಕಂಡುಹಿಡಿ.

## ತಮಾಷೆಯ ವೇಳೆ

**ರಹಸ್ಯದ ಸಂಖ್ಯೆಗಳು**

ಒಂದು ರಹಸ್ಯದ ಸಂಖ್ಯೆಯನ್ನು ಆರಿಸಿಕೋ (ಮನಸ್ಸಿನಲ್ಲಿಡಿ).
ಅದು 100 ರ ಅರ್ಧ ಭಾಗಕ್ಕಿಂತ ದೊಡ್ಡದಾಗಿದೆ.
ಅದು 7 ಹತ್ತುಗಳಿಗಿಂತ ಅಧಿಕವಾಗಿದೆ ಮತ್ತು ಹತ್ತುಗಳಿಗಿಂತ ಕಡಿಮೆಯಾಗಿದೆ.
ಹತ್ತರ ಸ್ಥಾನದ ಅಂಕೆಯು ಒಂದರ ಸ್ಥಾನದ ಅಂಕೆಗಿಂತ 2 ಹೆಚ್ಚಾಗಿದೆ
.ಆ ಸಂಖ್ಯೆಯಲ್ಲಿರುವ ಅಂಕೆಯನ್ನು ಕೂಡಿಸಿದಾಗ ಮೊತ್ತವು 12 ಬರುವುದು
ಆ ರಹಸ್ಯದ ಸಂಖ್ಯೆ ಯಾವುದು? ಕಂಡು ಹಿಡಿ.

ಈ ರೀತಿ ನಿಮ್ಮದೇ ಆದ ಕೆಲವು ಸೂಚನೆ (ಸುಳುವು) ಗಳನ್ನು ರಹಸ್ಯದ ಸಂಖ್ಯೆಗಳಿಗೆ ತಯಾರಿಸಿ, ರಹಸ್ಯದ ಸಂಖ್ಯೆಯನ್ನು ನಿಮ್ಮ ಗೆಳೆಯನಿಗೆ ಕಂಡು ಹಿಡಿಯುವಂತೆ ಸೂಚನೆಯನ್ನು ಕೊಟ್ಟು ಆಟವಾಡಿ ಆನಂದಿಸಿ.


## ಗಾತ್ರ (ಘನ ಪರಿಮಾಣ)



ಆಟವಾಡಿದ ಬಳಿಕ ಎಳಿಲನು ಕೈತುಂಬ ಗೋಲಿಗಳನ್ನು ತುಂಬಿಸಿಕೊಂಡು ಮನೆಗೆ ಬಂದನು. ಅವನನ್ನು ಕಂಡು ಅವನ ಸಹೋದರ ಅಖಿಲನು ಅವನಲ್ಲಿ ಕೈತುಂಬ ಗೋಲಿಗಳನ್ನು ನೀನು ಏಕೆ ಇಟ್ಟುಕೊಂಡಿರುವೆ?" ಎಂದು ಕೇಳಿದನು. ಅದಕ್ಕೆ ಅವನು, "ನಾನು ನನ್ನ ಗೆಳೆಯರೊಂದಿಗೆ ಗೋಲಿಯಾಟವನ್ನು ಆಡುತ್ತಿದ್ದೆ" ಎಂದು ಉತ್ತರಿಸಿದನು. ಆಗ ಅಖಿಲನು ಅವನ ಸಹೋದರನ ಬಳಿ, ನಾವೀಗ ಈ ಗೋಲಿಗಳನ್ನು ಉಪಯೋಗಿಸಿ **ಅಳತೆಯ ಗ್ಲಾಸ್(ಲೋಟ)ವೊಂದನ್ನು** ತಯಾರು ಮಾಡಿ, ಅಳತೆಯ ಲೋಟದ ಸಹಾಯದಿಂದ ಅಳತೆಯನ್ನು ಕಂಡು ಹಿಡಿಯುವ ಕ್ರಮವನ್ನು ಮತ್ತು ಮಾಡುವ ಕ್ರಮವನ್ನು ತಿಳಿಯೋಣ" ಎಂದು ಹೇಳಿದನು.

ಅಖಿಲನು ಒಂದು ಗಾಜಿನ ಲೋಟವನ್ನು ತೆಗೆದುಕೊಂಡನು. ಅದರೊಳಗೆ ಸ್ವಲ್ಪ ನೀರನ್ನು ಸುರಿದನು. ಆ ಲೋಟದ ಹೊರ ಬದಿಗೆ ಒಂದು ಬಿಳಿಯ ಕಾಗದವನ್ನು ಅಂಟಿಸಿದನು. ನೀರಿನ ಆರಂಭದ ಮಟ್ಟ(ಲೆವಲ್)ವನ್ನು **0** ಎಂದು ಬಿಳಿಯ ಕಾಗದದ ಮೇಲೆ ಗುರುತು ಮಾಡಿದನು.

ಒಂದೇ ಗಾತ್ರದ ಕೆಲವು ಗೋಲಿಗಳನ್ನು ತೆಗೆದುಕೊಂಡು, ಒಂದು ಗೋಲಿಯನ್ನು ಲೋಟದೊಳಗೆ ನಿಧಾನವಾಗಿ ಹಾಕಿದನು. ಆಗ ನೀರಿನ ಮಟ್ಟವು ಮೇಲೇರಿತು. ಮೇಲೇರಿದ ಆ ಮಟ್ಟವನ್ನು 1 ಗೋಲಿ (1ಗೋ) ಎಂದು ಕಾಗದದ ಮೇಲೆ ಗುರುತಿಸಿದನು. ಇದೇ ರೀತಿ ಉಳಿದ ಗೋಲಿಗಳನ್ನೂ ಒಂದರ ನಂತರ ಮತ್ತೊಂದರಂತೆ ಲೋಟದೊಳಗೆ ಹಾಕಿದಾಗ ಅಲ್ಲಿ ಏರುವ ನೀರಿನ ಮಟ್ಟವನ್ನು 2 ಗೋಲಿಗಳು **(2 ಗೋ), 3 ಗೋ, 4ಗೋ** ಎಂಬುದಾಗಿ ಗುರುತಿಸುತ್ತಾ ಬಂದನು.




ಬಳಿಕ ಲೋಟದೊಳಗಿನ ಎಲ್ಲಾ ಗೋಲಿಗಳನ್ನು ಹೊರ ತೆಗೆದಾಗ ನೀರಿನ ಮಟ್ಟವು ಪುನಃ **0** ಎಂಬಲ್ಲಿ ಹಿಂದಿರುಗಿತು.

ಎಳಿಲನು ಮತ್ತು ಅಖಿಲನು ತಯಾರಿಸಿದ ಸರಳವಾದ **ಅಳತೆಯ ಲೋಟವನ್ನು** ಈಗ ನೋಡಿ.


ಅಳತೆಯ ಲೋಟದ ಸಹಾಯದಿಂದ ವಿವಿಧ ವಸ್ತುಗಳು ನೀರಿನಲ್ಲಿ ಸಂಪೂರ್ಣವಾಗಿ

ಮುಳುಗುವಾಗ ನೀರಿನ ಮಟ್ಟದಲ್ಲಿ ಏರ್ಪಡುವ ಏರಿಕೆಯನ್ನು ನಾವು ಅಳೆಯಬಹುದು.



ಸರಿ. ನಾನೀಗ ರಬ್ಬರ್‌ವೊಂದನ್ನು ಗ್ಲಾಸ್‌ನೊಳಗೆ ಹಾಕುತ್ತೇನೆ ಎಂದು ಹೇಳಿ ರಬ್ಬರ್‌ನ್ನು ಗ್ಲಾಸ್‌ನೊಳಗೆ ಹಾಕಿದನು. ಒಡನೆ ನೀರಿನ ಮಟ್ಟವು ಅಂದಾಜಾಗಿ 2 ಗೋಲಿಗಳ ಗುರುತಿನ ಹಂತಕ್ಕೆ ಏರಿತು.

ಇದಾದ ನಂತರ ಒಂದು ಕಬ್ಬಿಣದ ತುಂಡೊಂದನ್ನು ಲೋಟದೊಳಗೆ ಹಾಕಿದನು. ಈ ಕಬ್ಬಿಣದ ತುಂಡು ಸ್ವಲ್ಪ ದೊಡ್ಡ ಗಾತ್ರದ್ದು. ಆದ ಕಾರಣ ಕಬ್ಬಿಣದ ತುಂಡು ನೀರಿನಲ್ಲಿ ಮುಳುಗಿದಾಗ ನೀರಿನ ಮಟ್ಟವು ಸುಮಾರು 4 ಗೋ ಅಳತೆಗೆ ಏರಿತು.



ಇದೇ ರೀತಿ ಎಳಿಲನು ನಿಂಬೆ, ನೀರುಳ್ಳಿ, ಆಲುಗೆಡ್ಡೆ ಮತ್ತು ನಾಣ್ಯಗಳಂತಹ ಬೇರೆ ಬೇರೆ ವಸ್ತುಗಳನ್ನು ಲೋಟದೊಳಗೆ ಒಂದೊಂದಾಗಿ ಹಾಕಿ ಲೋಟದ ನೀರಿನ ಮಟ್ಟವನ್ನು ಗಮನಿಸುತ್ತಾ ಬಂದನು.



**ಸೂಚನೆ**

ಯಾವುದೇ ವಸ್ತುವನ್ನು ಅಳತೆಯ ಲೋಟದ ನೀರಿನೊಳಗೆ ಹಾಕುವ ಮೊದಲು ಲೋಟದ ನೀರಿನ ಮಟ್ಟವು **0** ಗುರುತಿನಲ್ಲಿ ಇರಬೇಕು. ಇದನ್ನು ನೀವು



**ಚಟುವಟಿಕೆ**

ಇದೇ ರೀತಿ ನೀವೂ ಒಂದು ಅಳತೆಯ ಲೋಟವನ್ನು ತಯಾರಿಸಿ ವಿವಿಧ ವಸ್ತುಗಳನ್ನು ಅದರೊಳಗೆ ಹಾಕಿ ಅಲ್ಲಿ ಏರ್ಪಡುವ ನೀರಿನ ಮಟ್ಟವನ್ನು ಗುರುತಿಸಿ.


ಇಲ್ಲಿ ಕೊಟ್ಟಿರುವ ಕೋಷ್ಟಕವನ್ನು ತುಂಬಿರಿ.

| ವಸ್ತುಗಳು | ನೀರಿನ ಮಟ್ಟ |
|---|---|
| | |
| | |
| | |
| | |

## ಬೆಂಕಿ ಪೆಟ್ಟಿಗೆಗಳನ್ನು ನಾವು ಜೋಡಿಸೋಣವೇ

ಕೆಳಗಿರುವ ಪ್ರತಿಯೊಂದು ನಮೂನೆಯ ನಕ್ಷೆಯಲ್ಲೂ ಇರುವ ಬೆಂಕಿ ಪೆಟ್ಟಿಗೆಯ ಸಂಖ್ಯೆಯನ್ನು ಎಣಿಸಿದ ಬಳಿಕ ಅಲ್ಲಿ ಕೊಟ್ಟಿರುವ ಪೆಟ್ಟಿಗೆಯಲ್ಲಿ ಬರೆಯಬೇಕು.

1)



2)



3)



4)



5)



**ಗುಂಪಿನ ಚಟುವಟಿಕೆ**



ಇದೇ ರೀತಿ ಖಾಲಿಯಾದ ಬೆಂಕಿ ಪೆಟ್ಟಿಗೆಗಳಿಂದ ವಿವಿಧ ನಮೂನೆ (ಆಕಾರ – ಆಕೃತಿ)ಗಳನ್ನು ಮಾಡಿರಿ. ಅದರಲ್ಲಿ ಉಪಯೋಗಿಸಿರುವ ಬೆಂಕಿ ಪೆಟ್ಟಿಗೆಗಳು ಎಷ್ಟೆಂದು ಎಣಿಸುವಂತೆ ಮಾಡಿ.

## ಇಟ್ಟಿಗೆಗಳನ್ನು ಜೋಡಿಸಿಟ್ಟ ರಚನೆ

ಇಟ್ಟಿಗೆಗಳಿಂದ ಮಾಡಿದ ಬೇರೆ ಬೇರೆ ರಚನೆ (ನಮೂನೆ)ಗಳನ್ನು ಕೆಳಗೆ ಕೊಡಲಾಗಿದೆ. ಅವುಗಳಲ್ಲಿ ಉಪಯೋಗಿಸಿದ ಇಟ್ಟಿಗೆಗಳ ಸಂಖ್ಯೆಯನ್ನು ಕೊಟ್ಟಿರುವ ಚೌಕದಲ್ಲಿ ಬರೆಯಿರಿ.

1)



2)



3)



ಅವುಗಳ ನಮೂನೆಯು ಬೇರೆಯಾಗಿದ್ದರೂ ಗಾತ್ರ ಮಾತ್ರ ಒಂದೇ ಆಗಿದೆ.


**ಗುಂಪಿನ ಚಟುವಟಿಕೆ**



ಮೇಲೆ ತಿಳಿಸಿದ ನಮೂನೆಗಳಲ್ಲದೆ ಬೇರೆ ಕೆಲವು ನಮೂನೆಗಳಲ್ಲಿ 9 ಇಟ್ಟಿಗೆಗಳನ್ನು ನೀವೂ ಜೋಡಿಸಿರಿ.

## ಘನ ಆಕಾರಗಳ ರಚನೆ

ಕೆಳಗೆ ಕೊಟ್ಟಿರುವ ಕೆಲವು ನಮೂನೆಗಳನ್ನು ಗಮನಿಸಿ. ಅವುಗಳಲ್ಲಿ ಉಪಯೋಗಿಸಿರುವ ಬೆಂಕಿ ಪೆಟ್ಟಿಗೆಗಳನ್ನು ಎಣಿಸಿ ಅವುಗಳ ಸಂಖ್ಯೆಯನ್ನು ಬರೆಯಿರಿ. ಇದಲ್ಲದೆ ಪ್ರತಿಯೊಂದರಲ್ಲೂ ಅದು ಘನ ಆಕಾರವನ್ನು ಪಡೆಯಲು ಇನ್ನೂ ಬೇಕಾಗಿರುವ ಬೆಂಕಿ ಪೆಟ್ಟಿಗೆಗಳು ಎಷ್ಟೆಂದು ಎಣಿಸಿ ತಿಳಿದುಕೊಳ್ಳಿ. ಬಳಿಕ ಪೂರ್ತಿಗೊಂಡ ಪ್ರತಿಯೊಂದು ಆಕಾರದಲ್ಲಿ ಉಪಯೋಗಿಸಿದ ಬೆಂಕಿ ಪೆಟ್ಟಿಗೆಗಳು ಒಟ್ಟು ಎಷ್ಟೆಂದು ಎಣಿಸಿರಿ.





| ಕ್ರಮ ಸಂ. | ಕೊಡಲಾದ ಚಿತ್ರದಲ್ಲಿ ಉಪಯೋಗಿಸಿದ ಬೆಂಕಿ ಪೆಟ್ಟಿಗೆಗಳ ಸಂಖ್ಯೆ | ಆ ಆಕೃತಿಯನ್ನು ಪೂರ್ತಿಗೊಳಿಸಲು ಇನ್ನೂ ಬೇಕಾಗಿರುವ ಬೆಂಕಿ ಪೆಟ್ಟಿಗೆಗಳ ಸಂಖ್ಯೆ | ಪೂರ್ತಿಗೊಂಡ ಘನ ಆಕಾರದಲ್ಲಿ ಇರುವ ಒಟ್ಟು ಬೆಂಕಿ ಪೆಟ್ಟಿಗೆಗಳ ಸಂಖ್ಯೆ |
|---|---|---|---|
| 1. | | | |
| 2. | | | |
| 3. | | | |
| 4. | | | |
| 5. | | | |

## ಅಭ್ಯಾಸದ ವೇಳೆ

ಕೆಳಗೆ ಕೊಡಲಾದ ಪ್ರತಿಯೊಂದು ಆಕಾರದಲ್ಲಿ ಉಪಯೋಗಿಸಿದ ಬೆಂಕಿ ಪೆಟ್ಟಿಗೆಗಳನ್ನು ಎಣಿಸಿ ಅವುಗಳ ಸಂಖ್ಯೆಯನ್ನು ಅಲ್ಲಿ ಕೊಟ್ಟಿರುವ ಚೌಕದೊಳಗೆ ಬರೆಯಿರಿ.

1.



2.



3.



4.



5.



**ಯೋಚಿಸಲು**

ಪ್ರತಿಯೊಂದು ರಚನೆಯಲ್ಲೂ ಉಪಯೋಗಿಸಲಾದ ಬೆಂಕಿ ಪೆಟ್ಟಿಗೆಗಳು ಎಷ್ಟೆಂಬುದನ್ನು ಎಣಿಸದೇ ಇನ್ನೊಂದು ರೀತಿಯಲ್ಲಿ ಕಂಡು ಹಿಡಿಯಬಹುದು. ಅದುಯಾವುದೆಂದು ಕಂಡು ಹಿಡಿಯಿರಿ.

# 5 ಸಮಯ



ಪ್ರತಿಯೊಂದು ಗಡಿಯಾರವು ಯಾವ ಸಮಯವನ್ನು ತೋರಿಸುತ್ತಿದೆ?












ಕೆಳಗೆ ಕೊಡಲಾದ ಸಮಯಕ್ಕೆ ಅನುಗುಣವಾಗಿ ಗಡಿಯಾರದಲ್ಲಿ ಮುಳ್ಳುಗಳನ್ನು ಬರೆಯಿರಿ:



11:10



07:55



04:45





ಆನಂದನು ಬಸ್ಸಿನಲ್ಲಿ ಚೆನ್ನೈಯಿಂದ ಕನ್ಯಾಕುಮಾರಿಗೆ. ಪ್ರಯಾಣ ಮಾಡಿದನು. ವಿವಿಧ ಸ್ಥಳಗಳಲ್ಲಿ ಬಸ್ಸು ಬಂದು ಸೇರಿದ ಸಮಯ ಹಾಗೂ ಅಲ್ಲಿಂದ ಹೊರಟ ಸಮಯವನ್ನು ಅವನು ಗುರುತಿಸುತ್ತಾ ಬಂದನು. ಸಮಯದ ಪಟ್ಟಿಯ ಸಹಾಯದಿಂದ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.



| ಸ್ಥಳಗಳ ಹೆಸರು | ತಲುಪಿದ ಸಮಯ | ಹೊರಟ ಸಮಯ |
|---|---|---|
| ಚೆನ್ನೈ | – | 06:30ಪೂರ್ವಾಹ್ನ |
| ತಾಂಬರಂ | 07:25ಪೂರ್ವಾಹ್ನ | 07:30ಪೂರ್ವಾಹ್ನ |
| ದಿಂಡಿವನ | 09:45ಪೂರ್ವಾಹ್ನ | 09:55ಪೂರ್ವಾಹ್ನ |
| ವಿಳುಪುರ | 11:05ಪೂರ್ವಾಹ್ನ | 11:15ಪೂರ್ವಾಹ್ನ |
| ತಿರುಚಿ | 02:10ಅಪರಾಹ್ನ | 02:40ಅಪರಾಹ್ನ |
| ಮಧುರೆ | 04:55ಅಪರಾಹ್ನ | 05:05ಅಪರಾಹ್ನ |
| ವಿರುದುನಗರ | 05:55ಅಪರಾಹ್ನ | 06:00ಅಪರಾಹ್ನ |
| ತಿರುನೆಲ್ವೇಲಿ | 08:10ಅಪರಾಹ್ನ | 08:20ಅಪರಾಹ್ನ |
| ಕನ್ಯಾಕುಮಾರಿ | 09:35ಅಪರಾಹ್ನ | – |







**ನೆನಪಿನಲ್ಲಿಡಿ**

60 ಸೆಕೆಂಡುಗಳು = 1 ನಿಮಿಷ

60 ನಿಮಿಷಗಳು = 1 ಗಂಟೆ



ತಾಂಬರಂನಲ್ಲಿ ಬಸ್ಸು ಎಷ್ಟು ಹೊತ್ತು ನಿಂತಿತ್ತು?




| | | | |
|---|---|---|---|
| ತಾಂಬರಂನಿಂದ ಹೊರಟ ಸಮಯ ಪೂರ್ವಾಹ್ನ | = | | 7 : 30 |
| ತಾಂಬರಂಗೆ ಬಂದು ತಲುಪಿದ ಸಮಯ ಪೂರ್ವಾಹ್ನ | = | – | 7 : 25 |
| ತಾಂಬರಂನಲ್ಲಿ ಬಸ್ಸು ನಿಂತ ಕಾಲಾವಧಿ | = | | 0 : 05 ನಿಮಿಷಗಳು |

ಸಾಮಾನ್ಯವಾಗಿ ಇದನ್ನು ನಾವು 5 ನಿಮಿಷಗಳೆಂದು ಓದುತ್ತೇವೆ.



## ಇವುಗಳನ್ನು ಮಾಡಲು ಪ್ರಯತ್ನಿಸಿ

ಮಧುರೆಯಿಂದ ವಿರುದುನಗರಕ್ಕೆ ಹೋಗಲು ತೆಗೆದುಕೊಂಡ ಸಮಯವೆಷ್ಟು?




ವಿರುದುನಗರಕ್ಕೆ ಬಂದು ತಲುಪಿದ ಸಮಯ =

ಮಧುರೆಯಿಂದ ಹೊರಟ ಸಮಯ =

ಪ್ರಯಾಣಕ್ಕೆ ಬೇಕಾದ ಸಮಯ =












ದಿಂಡಿವನದಿಂದ ವಿಳುಪ್ಪುರಕ್ಕೆ ಪ್ರಯಾಣ ಮಾಡಲು ತೆಗೆದುಕೊಂಡ ಸಮಯವನ್ನು ಕಂಡು

| | | | | |
|---|---|---|---|---|
| ವಿಳುಪ್ಪುರವನ್ನು ಬಂದು ಸೇರಿದ ಸಮಯ | = | | 11 | 05 ಪೂರ್ವಾಹ್ನ |
| ದಿಂಡಿವನಂನಿಂದ ಹೊರಟ ಸಮಯ | = | – | 09 | 55 ಪೂರ್ವಾಹ್ನ |
| ಪ್ರಯಾಣಕ್ಕೆ ಬೇಕಾದ ಸಮಯ | = | | | |

**ಸೂಚನೆ:**

| ಗಂಟೆ | ನಿಮಿಷಗಳು |
|---|---|
| (11 – 1) = 10 | (60 + 5 = 65) |
| ~~11~~ | ~~05~~ |
| – 09 | 55 |
| 1 | 10 |

= 1ಗಂಟೆ 10 ನಿಮಿಷಗಳು

5 ನಿಮಿಷಗಳಿಂದ 55 ನಿಮಿಷಗಳನ್ನು ಕಳೆಯಲಾಗದು. ಆಗ 1 ಗಂಟೆಯನ್ನು ನಿಮಿಷಗಳಾಗಿ ಪರಿವರ್ತಿಸಿದ ಬಳಿಕ 05 ನಿಮಿಷಗಳೊಂದಿಗೆ ಅದನ್ನು ಕೂಡಿಸಿರಿ. ಬಳಿಕ ಕಳೆಯಿರಿ.

11 - 1 = 10 ಗಂ

1 ಗಂ = 60 ನಿ.

05 + 60 = 65 ನಿ.

65 - 55 = 10 ನಿ.

ಗಂಟೆಗಳನ್ನು ಕಳೆಯಿರಿ.

ದಿಂಡಿವನಂನಿಂದ ವಿಳುಪ್ಪುರಕ್ಕೆ ಪ್ರಯಾಣ ಮಾಡಲು ತೆಗೆದುಕೊಂಡ ಸಮಯ = 1 ಗಂಟೆ 10 ನಿಮಿಷ.



**ಇವುಗಳನ್ನು ಮಾಡಲು ಪ್ರಯತ್ನಿಸಿ**




ಚೆನ್ನೈಯಿಂದ ವಿಳುಪ್ಪುರಂಗೆ ಪ್ರಯಾಣ ಮಾಡಲು ತೆಗೆದುಕೊಂಡ ಸಮಯವನ್ನು ಕಂಡು ಹಿಡಿಯಿರಿ.

ವಿಳುಪ್ಪುರಂಗೆ ಬಂದು ಸೇರಿದ ಸಮಯ =

ಚೆನ್ನೈಯಿಂದ ಹೊರಟ ಸಮಯ =

ಪ್ರಯಾಣದ ಸಮಯ =






**ಅಭ್ಯಾಸದ ವೇಳೆ**

ಪ್ರಯಾಣದ ವಿವರಣಾ ಪಟ್ಟಿಯನ್ನು ಉಪಯೋಗಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯಿರಿ:


1) ಮಧುರೆಯಿಂದ ಕನ್ಯಾಕುಮಾರಿಗೆ ಬಸ್ಸಿನ ಪ್ರಯಾಣದ ಸಮಯವನ್ನು ಲೆಕ್ಕ ಹಾಕಿ.

2) ಮಧುರೆಯಲ್ಲಿ ಬಸ್ಸು ಎಷ್ಟು ಹೊತ್ತು ನಿಂತಿತ್ತು?

3) ತಿರುಚಿಯಿಂದ ತಿರುನೆಲ್ವೇಲಿಗೆ ಪ್ರಯಾಣಕ್ಕೆ ತೆಗೆದುಕೊಂಡ ಸಮಯವನ್ನು ಕಂಡು ಹಿಡಿಯಿರಿ.






ವಿಳುಪ್ಪುರಂನಿಂದ ತಿರುನೆಲ್ವೇಲಿಗೆ ಪ್ರಯಾಣ ಮಾಡಲು ತೆಗೆದುಕೊಂಡ ಸಮಯವನ್ನು ಕಂಡು ಹಿಡಿಯಿರಿ.

ತಿರುನೆಲ್ವೇಲಿಗೆ ಬಂದು ಸೇರಿದ ಸಮಯ = 8 : 10 ಅಪರಾಹ್ನ

ವಿಳುಪ್ಪುರಂನಿಂದ ಹೊರಟ ಸಮಯ = – 11 : 15 ಪೂರ್ವಾಹ್ನ

ಪ್ರಯಾಣದ ಸಮಯ =



**ಇದನ್ನು ತಿಳಿ**

ಪೂರ್ವಾಹ್ನವನ್ನು ಅಪರಾಹ್ನದಿಂದ ಕಳೆಯಬೇಕಾದರೆ ಅಪರಾಹ್ನಕ್ಕೆ 12 ಗಂಟೆಗಳನ್ನು

| | | ಗಂ | | ನಿ |
|---|---|---|---|---|
| | | (20–1) = 19 | | 10+60 = 7 |
| ತಿರುನೆಲ್ವೇಲಿಗೆ ಬಂದು ಸೇರಿದ ಸಮಯ | = | 20 | : | 10 |
| (12 : 00 + 8 : 10 = 20 : 10) | | | | |
| ವಿಳುಪ್ಪುರಂನ್ನು ಬಿಟ್ಟ ಸಮಯ | = | – 11 | : | 15 |
| ಪ್ರಯಾಣದ ಸಮಯ | = | 8 | | 55 |

ಆದುದರಿಂದ ವಿಳುಪ್ಪುರದಿಂದ ತಿರುನೆಲ್ವೇಲಿಗೆ ಪ್ರಯಾಣ ಮಾಡಲು ತೆಗೆದುಕೊಂಡ ಸಮಯ 8 ಗಂಟೆ 55



**ಅಭ್ಯಾಸದ ವೇಳೆ**

ಪ್ರಯಾಣದ ವಿವರಣಾ ಪಟ್ಟಿಯ ಸಹಾಯದಿಂದ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯಿರಿ:

1) ದಿಂಡಿವನಂನಿಂದ ಮಧುರೆಗೆ ಪ್ರಯಾಣಿಸಲು ತೆಗೆದುಕೊಂಡ ಸಮಯವನ್ನು ಕಂಡು ಹಿಡಿಯಿರಿ.

2) ಚೆನ್ನೈಯಿಂದ ಕನ್ಯಾಕುಮಾರಿಗೆ ಪ್ರಯಾಣ ಮಾಡಲು ತೆಗೆದುಕೊಂಡ ಸಮಯವನ್ನು ಲೆಕ್ಕೆಹಾಕಿ.

3) ವಿಳುಪ್ಪುರಂನಿಂದ ವಿರುದುನಗರ್‌ಗೆ ಪ್ರಯಾಣ ಮಾಡಲು ತೆಗೆದುಕೊಂಡ ಸಮಯವನ್ನು ಕಂಡು ಹಿಡಿಯಿರಿ.



## ಜೋಸೆಫ್‌ನ ದಿನಚರಿ ಪುಸ್ತಕದಿಂದ

ಜೋಸೆಫ್ ತನ್ನ ಒಂದು ದಿನದ ಕೆಲಸ ಕಾರ್ಯಗಳನ್ನು ತನ್ನ ದಿನಚರಿ ಪುಸ್ತಕದಲ್ಲಿ ಬರೆದಿಟ್ಟಿರುವನು. ಅವನ ಪ್ರತಿಯೊಂದು ಕಾರ್ಯಕ್ಕೆ ಅವನು ತೆಗೆದುಕೊಂಡ ಕಾಲಾವಧಿಯನ್ನು ಕಂಡು ಹಿಡಿಯಿರಿ.

| ಚಟುವಟಿಕೆ | ಯಿಂದ | ವರೆಗೆ | ಕಾಲಾವಧಿ ಗಂ | ನಿಮಿಷ |
|---|---|---|---|---|
| **ಬೆಳಗ್ಗಿನ ಹೊತ್ತು** | | | | |
| ಏಳುವುದು | 6 : 00 ಪೂರ್ವಾಹ್ನ | | | |
| ಸ್ನಾನ | 6 : 00 ಪೂರ್ವಾಹ್ನ | 6 : 50ಪೂರ್ವಾಹ್ನ | | |
| ಪ್ರಾರ್ಥನೆ | 6 : 50 ಪೂರ್ವಾಹ್ನ | 7 : 00ಪೂರ್ವಾಹ್ನ | | |
| ಓದುವ ಸಮಯ | 7 : 00 ಪೂರ್ವಾಹ್ನ | 8 : 30ಪೂರ್ವಾಹ್ನ | 1 | 30 |
| ಬೆಳಗ್ಗಿನ ಉಪಾಹಾರ | 8 : 30 ಪೂರ್ವಾಹ್ನ | 8 : 45ಪೂರ್ವಾಹ್ನ | | |
| ಶಾಲೆಗೆ ಹೋಗುವುದು | 8 : 45ಪೂರ್ವಾಹ್ನ | 9 : 00ಪೂರ್ವಾಹ್ನ | | |
| **ಶಾಲೆಯಲ್ಲಿ** | | | | |
| ಬೆಳಗ್ಗಿನ ಪ್ರಾರ್ಥನೆ | 9 : 20ಪೂರ್ವಾಹ್ನ | 9 : 30ಪೂರ್ವಾಹ್ನ | | |
| ಬೆಳಗ್ಗಿನ ಓದುವ ಸಮಯ | 9 : 30ಪೂರ್ವಾಹ್ನ | 12 : 40ಅಪರಾಹ್ನ | 3 | 10 |
| ಮಧ್ಯಾಹ್ನದ ಊಟಕ್ಕೆ | 12 : 40ಅಪರಾಹ್ನ | 2 : 00ಅಪರಾಹ್ನ | 1 | 20 |
| ಮಧ್ಯಾಹ್ನದ ಓದುವ ಸಮಯ | 2 : 00ಅಪರಾಹ್ನ | 4 : 10ಅಪರಾಹ್ನ | 2 | 10 |
| ಸಂಜೆಯ ಪ್ರಾರ್ಥನೆ | 4 : 10ಅಪರಾಹ್ನ | 4 : 20ಅಪರಾಹ್ನ | | |
| **ಸಂಜೆಯಲ್ಲಿ** | | | | |
| ಆಟಗಳು | 4 : 30ಅಪರಾಹ್ನ | 6 : 00ಅಪರಾಹ್ನ | | |
| ಮನೆಗೆಲಸ | 6 : 00ಅಪರಾಹ್ನ | 6 : 45ಅಪರಾಹ್ನ | 0 | 45 |
| ಕಲಿಕೆಯ ಸಮಯ | 6 : 45ಅಪರಾಹ್ನ | 7 : 30ಅಪರಾಹ್ನ | 0 | 45 |
| ದೂರದರ್ಶನದ ವಿಕ್ಷಣೆ | 7 : 30ಅಪರಾಹ್ನ | 8 : 15ಅಪರಾಹ್ನ | | |
| ರಾತ್ರಿಯ ಊಟಕ್ಕೆ | 8 : 15ಅಪರಾಹ್ನ | 8 : 30ಅಪರಾಹ್ನ | | |
| ನಿದ್ದೆಗೆ ಹೊರಡುವುದು | 8 : 30 ಅಪರಾಹ್ನ | – | | |



ಶಾಲೆಯಲ್ಲಿ ಬೆಳಗ್ಗಿನ ಹೊತ್ತಿನಲ್ಲಿ ಮತ್ತು ಮಧ್ಯಾಹ್ನದ ಮೇಲೆ ಕಲಿಯುವ ಸಮಯವನ್ನು ಕಂಡು ಹಿಡಿಯಿರಿ:

| | | ಗಂ | ನಿ |
|---|---|---|---|
| ಬೆಳಗ್ಗಿನ ಹೊತ್ತಿನಲ್ಲಿ ಕಲಿಯುವ ಸಮಯ | = | 3 | 10 |
| ಮಧ್ಯಾಹ್ನದ ಮೇಲೆ ಕಲಿಯುವ ಸಮಯ | = + | 2 | 10 |
| ಶಾಲೆಯಲ್ಲಿ ಕಲಿಯುವ ಒಟ್ಟು ಸಮಯ | = | 5 | 20 |

**ಬೆಳಗೆ ಮತ್ತು ಮಧ್ಯಾಹ್ನದ ಮೇಲೆ ಶಾಲೆಯಲ್ಲಿ ಕಲಿಯುವ ಒಟ್ಟು ಸಮಯವು 5 ಗಂಟೆಗಳು ಮತ್ತು 20 ನಿಮಿಷಗಳು.**



ಜೋಸೆಫ್‌ನು ತನ್ನ ಮನೆಗೆಲಸವನ್ನು ಮುಗಿಸಲು ಮತ್ತು ಮನೆಯಲ್ಲಿ ಓದಲು ತೆಗೆದುಕೊಂಡ ಸಮಯವನ್ನು ಕಂಡು ಹಿಡಿಯಿರಿ.

| | | ಗಂ | ನಿ |
|---|---|---|---|
| ಬೆಳಿಗ್ಗೆ ಓದುವ ಸಮಯ | = | 1 | 30 |
| ಸಂಜೆ ಓದುವ ಸಮಯ | = | 0 | 45 |
| ಅವನ ಮನೆಗೆಲಸವನ್ನು ಮುಗಿಸಲು ತೆಗೆದುಕೊಂಡ ಸಮಯ | = + | 0 | 45 |
| ಒಟ್ಟು ಸಮಯ | = | 3 | 00 |

ನಿಮಿಷಗಳನ್ನು ಕೂಡಿಸಿರಿ

45 + 45 + 30 = 120 ನಿ

ನಿಮಿಷಗಳನ್ನು ಗಂಟೆಗಳಾಗಿ ಬದಲಾಯಿಸಿ

120 ÷ 60 = 2 ಗಂ

ಗಂಟೆಗಳನ್ನು ಕೂಡಿಸಿರಿ

2 + 1 = 3 ಗಂ

ಓದಲು ಮತ್ತು ಮನೆಗೆಲಸವನ್ನು ಮುಗಿಸಲು ಜೋಸೆಫ್‌ಗೆ ಬೇಕಾದ ಒಟ್ಟು ಸಮಯ 3 ಗಂಟೆಗಳು.



## ಇವುಗಳನ್ನು ಮಾಡಲು ಪ್ರಯತ್ನಿಸಿ

(ಜೋಸೆಫ್‌ನ ದಿನಚರಿಯಿಂದ)

1. ಬೆಳಗಿನ ಉಪಾಹಾರ ಮತ್ತು ರಾತ್ರಿಯ ಊಟಕ್ಕೆ ಅವನು ತೆಗೆದುಕೊಂಡ ಸಮಯವನ್ನು ತಿಳಿಯಿರಿ.
2. ಮನೆಯಲ್ಲಿ ಮತ್ತು ಶಾಲೆಯಲ್ಲಿ ಪ್ರಾರ್ಥನೆಗಾಗಿ ಉಪಯೋಗಿಸಿದ ಒಟ್ಟು ಸಮಯಗಳನ್ನು ಲೆಕ್ಕ ಮಾಡಿ.
3. ಆಟವಾಡಲು ಮತ್ತು ದೂರದರ್ಶನವನ್ನು ವೀಕ್ಷಿಸಲು ತೆಗೆದುಕೊಂಡ ಸಮಯವನ್ನು ಕಂಡು ಹಿಡಿಯಿರಿ?







## ಅಭ್ಯಾಸದ ವೇಳೆ

1. ಒಬ್ಬ ತನ್ನ ಮನೆಗೆ ಹೋಗಬೇಕಾದರೆ 4 ಗಂಟೆ 40 ನಿಮಿಷ ರೈಲಲ್ಲಿ ಮತ್ತು 1 ಗಂ 15ನಿ ಬಸ್ಸಲ್ಲಿ ಪ್ರಯಾಣ ಮಾಡಿದರೆ ಅವನು ಪ್ರಯಾಣಕ್ಕಾಗಿ ಉಪಯೋಗಿಸಿದ ಒಟ್ಟು ಸಮಯವೆಷ್ಟು?
2. ಒಬ್ಬ ಕಲಾಕಾರನು 6:30 ಪೂರ್ವಾಹ್ನ ಚಿತ್ರ ಬರೆಯಲು ಆರಂಭಿಸಿ 11:50 ಪೂರ್ವಾಹ್ನಕ್ಕೆ ಮುಗಿಸಿದರೆ ಅವನು ಚಿತ್ರ ಬರೆಯಲು ತೆಗೆದುಕೊಂಡ ಒಟ್ಟು ಸಮಯವೆಷ್ಟು?



3. ಒಂದು ಅಂಗಡಿಯಲ್ಲಿ ಸಾಮಾನುಗಳ ಮಾರಾಟವನ್ನು ಅಪರಾಹ್ನ 1.30 ರಿಂದ ಆರಂಭಿಸಿ 4.00 ಅಪರಾಹ್ನದವರೆಗೆ ನಿಲ್ಲಿಸುವುದು. ಹಾಗಾದರೆ ಆ ಅಂಗಡಿಯವನು ಎಷ್ಟು ಕಾಲಾವಧಿಯವರೆಗೆ ಸಾಮಾನುಗಳ ಮಾರಾಟವನ್ನು ನಿಲ್ಲಿಸುವನೆಂದು ಕಂಡು ಹಿಡಿಯಿರಿ?




4. ಒಂದು ನೀರಿನ ತೊಟ್ಟಿಯು ತುಂಬಲು 2ಗಂ 45ನಿ ಬೇಕಾಗುವುದು. ಅದಕ್ಕೆ 3ಗಂ 45ನಿಮಿಷಗಳು ಎಲ್ಲಾ ಮನೆಗಳಿಗೆ ನೀರನ್ನು ಹಂಚಲು ಬೇಕಾಗುವುದು. ಹಾಗಾದರೆ ಆ ತೊಟ್ಟಿಗೆ ಒಂದು ಸಲ ನೀರನ್ನು ತುಂಬಲು ಮತ್ತು ಎಲ್ಲಾ ಮನೆಗಳಿಗೆ ನೀರನ್ನು ಹಂಚಲು ಬೇಕಾಗುವ ಒಟ್ಟು ಸಮಯವನ್ನು ಕಂಡು ಹಿಡಿಯಿರಿ?

5. ಶಾಲೆಯೊಂದರಲ್ಲಿ ವಸ್ತುಪ್ರದರ್ಶನ ಕಾರ್ಯಕ್ರಮವು ಪೂರ್ವಾಹ್ನ 10:30 ಕ್ಕೆ ಆರಂಭವಾಗಿ ಅಪರಾಹ್ನ 3;00 ಕ್ಕೆ ಮುಕ್ತಾಯವಾಯಿತು. ಹಾಗಾದರೆ ವಸ್ತುಪ್ರದರ್ಶನ ನಡೆಯಲು ತೆಗೆದುಕೊಂಡ ಒಟ್ಟು ಕಾಲಾವಧಿಯನ್ನು ಕಂಡು ಹಿಡಿಯಿರಿ.



## ಚಟುವಟಿಕೆ

ಪ್ರತಿಯೊಂದು ಸಾಲಿನಲ್ಲಿರುವ ಗಡಿಯಾರವು ತೋರಿಸುವ ಸಮಯವನ್ನು ಜಾಗ್ರತೆಯಿಂದ ಗಮನಿಸಿ. ಅದರ ಕ್ರಮಬದ್ಧತೆಯನ್ನು ಗಮನಿಸಿ ಸಾಲಿನಲ್ಲಿ ಮುಂದೆ ಕೊಟ್ಟಿರುವ ಕೊನೆಯ ನಾಲ್ಕು ಗಡಿಯಾರಗಳಲ್ಲಿ ಎಷ್ಟು ಸಮಯ ತೋರಿಸಬೇಕೆಂದು ಕಂಡು ಹಿಡಿಯಿರಿ.



# 6 ಹಣ



ನವೀನನು ತನ್ನ ಉಳಿತಾಯದ ಡಬ್ಬವನ್ನು ತೆರೆದು ಅದರೊಳಗಿದ್ದ ನಾಣ್ಯಗಳು ಮತ್ತು ರೂಪಾಯಿ ನೋಟುಗಳನ್ನು ವಿಂಗಡಿಸಿದನು. ಕೆಳಗೆ ಕೊಟ್ಟಿರುವ ಕೋಷ್ಟಕವನ್ನು ಗಮನಿಸಿ. ಅವನ ಉಳಿತಾಯದ ವಿವರ ಹೀಗಿದೆ.




| | | |
|---|---|---|
| 10 ರೂಪಾಯಿ ನೋಟುಗಳ ಸಂಖ್ಯೆ | – | 25 |
| 5 ರೂಪಾಯಿ ನಾಣ್ಯಗಳ ಸಂಖ್ಯೆ | – | 40 |
| 1 ರೂಪಾಯಿ ನಾಣ್ಯಗಳ ಸಂಖ್ಯೆ | – | 150 |
| 20 ರೂಪಾಯಿ ನೋಟುಗಳ ಸಂಖ್ಯೆ | – | 10 |
| 100 ರೂಪಾಯಿ ನೋಟುಗಳ ಸಂಖ್ಯೆ | – | 4 |
| 50 ರೂಪಾಯಿ ನೋಟುಗಳ ಸಂಖ್ಯೆ | – | 8 |
| 2 ರೂಪಾಯಿ ನಾಣ್ಯಗಳ ಸಂಖ್ಯೆ | – | 45 |





**ಚಟುವಟಿಕೆ** ಅವನ ಉಳಿತಾಯದ ಹಣ ಒಟ್ಟು ಎಷ್ಟೆಂದು ನಾವು ಲೆಕ್ಕ ಮಾಡೋಣವೇ?

| | | ₹. |
|---|---|---|
| 100 ರೂಪಾಯಿ ನೋಟುಗಳ ಮೌಲ್ಯವು | 100 × 4 | 400 |
| 50 ರೂಪಾಯಿ ನೋಟುಗಳ ಮೌಲ್ಯವು | | |
| 20 ರೂಪಾಯಿ ನೋಟುಗಳ ಮೌಲ್ಯವು | | |
| 10 ರೂಪಾಯಿ ನೋಟುಗಳ ಮೌಲ್ಯವು | | |
| 5 ರೂಪಾಯಿ ನಾಣ್ಯಗಳ ಮೌಲ್ಯವು | | |
| 2 ರೂಪಾಯಿ ನಾಣ್ಯಗಳ ಮೌಲ್ಯವು | 2 × 45 | 90 |
| 1 ರೂಪಾಯಿ ನಾಣ್ಯಗಳ ಮೌಲ್ಯವು | | |
| ಒಟ್ಟು ಹಣ | | |

**ಅವನಲ್ಲಿರುವ ಹಣದ ಒಟ್ಟು ಮೌಲ್ಯ**

## ಚಟುವಟಿಕೆ



ಅವನು ತನ್ನ ಸಹೋದರಿ ರಾಧಳಿಗೆ ₹550 ನ್ನು ಹಂಚುತ್ತಾನೆ.

(I) ಮೊತ್ತ ₹550 ಕ್ಕೆ ತಲುಪುವಂತಹ 3 ಸಂಭವನೀಯ ಮೌಲ್ಯವನ್ನು ಕಂಡು ಹಿಡಿಯಿರಿ.

ಒಂದು ಉದಾಹರಣೆಯನ್ನು ನಿಮಗಾಗಿ ಇಲ್ಲಿ ಕೊಡಲಾಗಿದೆ.

| ಮೌಲ್ಯಗಳ (denominations)ಸಂಖ್ಯೆಗಳು | | | | ಒಟ್ಟು ಬೆಲೆ |
|---|---|---|---|---|
| 50 | x | 5 | = | ₹ 250.00 |
| 10 | x | 20 | = | ₹ 200.00 |
| 2 | × | 30 | = | ₹ 60.00 |
| 1 | x | 40 | = | ₹ 40.00 |
| ಒಟ್ಟು ಮೊತ್ತ | | | = | ₹ 550.00 |



**ನೆನಪಿನಲ್ಲಿಡಿ**

₹ 1 = 100 ಪೈಸೆ

(ii) ಅವನಲ್ಲಿ ಉಳಿದಿರುವ ಹಣವೆಷ್ಟು?

## ಸಂಕಲನ




ಅವನು ತನ್ನ ಸಹೋದರಿ ರಾಧಳಿಗೆ ₹ 37.50, ₹ 473.75, ₹ 6,076.50 ಮತ್ತು ₹9.50.

| | |
|---|---|
| | 1 2 2 |
| ₹ | 37.50 |
| ₹ | 473.75 |
| ₹ | 6,076.50 |
| ₹ | 9.50 |
| ₹ | 6,597.25 |

ಪೈಸೆಗಳನ್ನು ಕೂಡಿಸಿರಿ

50 + 50 + 75 + 50 = 225 ಪೈಸೆ

ಪೈಸೆಗಳನ್ನು ₹ಗಳಾಗಿ ಪರಿವರ್ತಿಸಿ

225 ÷ 100 = ₹ 2 ಮತ್ತು 25 ಪೈಸೆ

₹ ನ್ನು ಕೂಡಿಸಿರಿ

9 + 6076 + 473 + 37 + 2 = ₹ 6,597



### ಇವುಗಳನ್ನು ಮಾಡಲು ಪ್ರಯತ್ನಿಸಿ

1) ಕೆಳಗಿನವುಗಳಿಗೆ ಉತ್ತರಿಸಿ:

i) ₹ 645.75 + ₹ 760.50 + ₹ 135.50

ii) ₹ 4375.50 + ₹ 8436.50 + ₹ 9647.75

2) ಒಟ್ಟು ಮೊತ್ತವನ್ನು ಕಂಡು ಹಿಡಿಯಿರಿ.

i) ₹ 8000.50, ₹ 6366.50 ಮತ್ತು ₹ 2322.50



ಒಬ್ಬ ವ್ಯಾಪಾರಿಯು ಅನುಕ್ರಮವಾಗಿ ಮೂರು ದಿನಗಳಲ್ಲಿ ವ್ಯಾಪಾರ ಮಾಡಿ ₹ 436.75, ₹ 278.75 ಮತ್ತು ₹ 678.75 ರಂತೆ ಹಣವನ್ನು ಗಳಿಸಿದನು. ಹಾಗಾದರೆ ಆ ವ್ಯಾಪಾರಿಯು ಆ ಮೂರು ದಿನಗಳಲ್ಲಿ ವ್ಯಾಪಾರ ಮಾಡಿ ಗಳಿಸಿದ ಒಟ್ಟು ಹಣ ಎಷ್ಟೆಂದು ಲೆಕ್ಕ ಹಾಕಿ?

| | | |
|---|---|---|
| | | 122 1 |
| ಮೊದಲನೇ ದಿನದ ವ್ಯಾಪಾರದಲ್ಲಿ ಗಳಿಸಿದ ಹಣ | = | ₹ 436.75 |
| ಎರಡನೇ ದಿನದ ವ್ಯಾಪಾರದಲ್ಲಿ ಗಳಿಸಿದ ಹಣ | = | ₹ 278.75 |
| ಮೂರನೇ ದಿನದ ವ್ಯಾಪಾರದಲ್ಲಿ ಗಳಿಸಿದ ಹಣ | = | ₹ 678.75 |
| ವ್ಯಾಪಾರಿಗೆ ದೊರೆತ ಒಟ್ಟು ಹಣ | = | ₹ 1,394.25 |

3 ದಿನಗಳ ವ್ಯಾಪಾರದಲ್ಲಿ ಅವನಿಗೆ ದೊರೆತ ಒಟ್ಟು

ಪೈಸೆಗಳನ್ನು ಕೂಡಿಸಿರಿ

75 + 75 + 75 = 225 ಪೈ

₹ ಗಳಾಗಿ ಪರಿವರ್ತಿಸಿ

225 ÷ 100 = ₹ 2 and

25 ಪೈ ₹ ಗಳನ್ನು ಕೂಡಿಸಿ

678 + 278 + 436 + 2

= ₹ 1,394



ಸೂಚನೆ

**ಶಿಕ್ಷಕರಿಗೆ :** ವಿದ್ಯಾರ್ಥಿಗಳಿಗೆ ಇದೇ ರೀತಿಯ ಕೆಲವು ಲೆಕ್ಕಗಳನ್ನು ಅಭ್ಯಾಸಕ್ಕಾಗಿ ನೀಡಬಹುದು.

## ವ್ಯವಕಲನ

₹ 5,269.50 ರಿಂದ ₹ 739.75ನ್ನು ಕಳೆಯಿರಿ.



```
        18  14
  4 12 5 8̸   4̸ 10
₹  5̸ 2 6̸ 9̸ . 5̸ 0̸
₹      7 3 9 . 7 5
₹    4 5 2 9 . 7 5
```

75 ಪೈಸೆಗಳನ್ನು 50 ಪೈಸೆಗಳಿಂದ ಕಳೆಯಲು ಅಸಾಧ್ಯ. ಆಗ ₹ 1 ನ್ನು ಪೈಸೆಗಳಾಗಿ ಪರಿವರ್ತಿಸಿ. ಅದನ್ನು 50 ಪೈಸೆಗಳೊಂದಿಗೆ ಸೇರಿಸಿ.

5269 - 1 = ₹ 5268

₹ 1 = 100 ಪೈಸೆ

100 + 50 = 150 ಪೈಸೆ

150 - 75 = 75 ಪೈಸೆ

ಬಳಿಕ ₹ ಗಳನ್ನು ಕಳೆಯಿರಿ.

5268 - 739 = ₹ 4529



### ಇವುಗಳನ್ನು ಮಾಡಲು ಪ್ರಯತ್ನಿಸಿ

(1) ಉತ್ತರವನ್ನು ಕಂಡು ಹಿಡಿಯಿರಿ:

i) ₹ 684.75 – ₹ 294.50

ii) ₹ 188.00 – ₹ 88.00

iii) ₹ 6,846.50 – ₹ 436.75

(2) ₹ 2144.50 ರಿಂದ ₹ 1984.75 ನ್ನು ಕಳೆಯಿರಿ.

(3) ₹ 12.75 ಮತ್ತು ₹ 6888.50 ಗಳಿಗೆ ಇರುವ ವ್ಯತ್ಯಾಸವನ್ನು ಕಂಡು ಹಿಡಿಯಿರಿ.




ಒಬ್ಬನು ತನ್ನ ಬಳಿ ಇದ್ದ ₹ 6435 ರಿಂದ ₹ 745.50 ನ್ನು ಖರ್ಚು ಮಾಡಿದರೆ ಅವನಲ್ಲಿ ಉಳಿಯುವ ಹಣವೆಷ್ಟು?

| | | | | | | | |
|---|---|---|---|---|---|---|---|
| | | 5 | 13 | 12 | 14 . | 10 |
| ಅವನಲ್ಲಿದ್ದ ಒಟ್ಟು ಹಣ | = | ₹ ~~6~~ | ~~4~~ | 3 | ~~5~~ . | ~~0~~0 |
| ಖರ್ಚು ಮಾಡಿದ ಹಣ | = | ₹ | 7 | 4 | 5 . | 50 |
| ಉಳಿದಿರುವ ಹಣ | = | ₹ 5 | 6 | 8 | 9 . | 50 |

ಉಳಿದಿರುವ ಒಟ್ಟು ಹಣ ₹ 5689.50

00 ಪೈಸೆಗಳಿಂದ 50 ಪೈಸೆಗಳನ್ನು ಕಳೆಯುವಾಗ ಮೊದಲು ₹ 1ನ್ನು ಪೈಸೆಗಳಾಗಿ ಪರಿವರ್ತಿಸಿ ಬಳಿಕ ಅದರೊಂದಿಗೆ 00 ಪೈಸೆಗಳನ್ನು ಸೇರಿಸಬೇಕು.

6435 - 1 = ₹ 6434
₹ 1 = 100 ಪೈಸೆ
100 + 0 = 100 ಪೈಸೆ
100 - 50 = 50 ಪೈಸೆ

₹ ಗಳನ್ನು ಕಳೆಯಿರಿ.

6434 - 745 = ₹ 5689




**ಶಿಕ್ಷಕರಿಗೆ :** ವಿದ್ಯಾರ್ಥಿಗಳಿಗೆ ಇದೇ ರೀತಿಯ ಕೆಲವು ಲೆಕ್ಕಗಳನ್ನು ಅಭ್ಯಾಸಕ್ಕಾಗಿ ನೀಡಬಹುದು.

## ಗುಣಾಕಾರ




ಉತ್ತರವನ್ನು ಕಂಡು ಹಿಡಿಯಿರಿ ₹ 543.75 × 15.

₹ 543.75 × 15
₹ 8156.25

ಪೈಸೆಗಳನ್ನು ಗುಣಿಸಿರಿ

75 × 15 = 1125 ಪೈಸೆ

```
  75 × 15
 375
 75
1125
```

ಪೈಸೆಗಳನ್ನು ₹ ಗಳಾಗಿ ಪರಿವರ್ತಿಸಿ

1125 ÷ 100

= ₹ 11  25 ಪೈ

```
        11
100 ) 1125
       100
       125
       100
        25
```

₹ ಗಳನ್ನು ಗುಣಿಸಿರಿ

543 × 15 = ₹ 8145

ರೂ.ಗಳನ್ನು ಕೂಡಿಸಿ

8145 + 11 = ₹ 8156

```
 543 × 15
2715
543
8145
```



### ಇವುಗಳನ್ನು ಮಾಡಲು ಪ್ರಯತ್ನಿಸಿ

ಉತ್ತರವನ್ನು ಕಂಡು ಹಿಡಿಯಿರಿ

i) ₹ 355.50 × 7
ii) ₹ 960.75 × 8
iii) ₹ 66.75 × 9
iv) ₹ 212.50 × 11
v) ₹ 243.50 × 12



ಒಂದು ಪೆನ್ನಿನ ಬೆಲೆ ₹ 15.50. ಆದರೆ ಅಂತಹ 7 ಪೆನ್ನುಗಳ ಒಟ್ಟು ಬೆಲೆಯನ್ನು ಕಂಡು ಹಿಡಿಯಿರಿ?



| | | |
|---|---|---|
| 1 ಪೆನ್ನಿನ ಬೆಲೆ | = ₹ | 15 . 50 |
| 7 ಪೆನ್ನುಗಳ ಬೆಲೆ | = ₹ | 15 . 50 × 7 |
| ಒಟ್ಟು ಬೆಲೆ | = ₹ | 108 . 50 |

7 ಪೆನ್ನುಗಳ ಒಟ್ಟು ಬೆಲೆ ₹ 108. 50

ಪೈಸೆಗಳನ್ನು ಗುಣಿಸಿರಿ

$50 \times 7 = 350$ ಪೈಸೆ

ಪೈಸೆಗಳನ್ನು ರೂಪಾಯಿಗಳಿಗೆ ಪರಿವರ್ತಿಸಿ

$350 \div 100 =$ ₹ 3. 50

ರೂಪಾಯಿಗನ್ನು ಗುಣಿಸಿರಿ

$15 \times 7 =$ ₹ 105

ರೂಪಾಯಿಗಳನ್ನು ರೂಪಾಯಿಗಳೊಂದಿಗೆ ಕೂಡಿಸಿರಿ,

$3 + 105 =$ ₹ 108



**ಸೂಚನೆ**

**ಶಿಕ್ಷಕರಿಗೆ :** ವಿದ್ಯಾರ್ಥಿಗಳಿಗೆ ಇದೇ ರೀತಿಯ ಕೆಲವು ಲೆಕ್ಕಗಳನ್ನು ಅಭ್ಯಾಸಕ್ಕಾಗಿ ನೀಡಬಹುದು.

## ಭಾಗಾಕಾರ



ಉತ್ತರವನ್ನು ಕಂಡು ಹಿಡಿಯಿರಿ ₹ 6834.00 ÷ 12.

₹ 6834.00 ÷ 12 = ₹ 569.50

₹ ಗಳನ್ನು ಭಾಗಿಸಿರಿ

$6834 \div 12 =$ ₹ 569

```
    569
12)6834
   60
   ---
    83
    72
   ---
    114
    108
   ---
      7
```

ಉಳಿದ (ಶೇಷ) ₹ 6 ನ್ನು ಪೈಸೆಗಳಾಗಿ ಪರಿವರ್ತಿಸಿದ ಬಳಿಕ ಅದನ್ನು ಪೈಸೆಗಳೊಂದಿಗೆ ಕೂಡಿಸಿ.

$6 \times 100 = 600$

$= 600$ ಪೈಸೆ

ಪೈಸೆಗಳನ್ನು ಭಾಗಿಸಿರಿ

$600 \div 12 = 50$ ಪೈಸೆ

```
    50
12)600
   60
   --
   00
    0
   --
    0
```



### ಇವುಗಳನ್ನು ಮಾಡಲು ಪ್ರಯತ್ನಿಸಿ

ಉತ್ತರವನ್ನು ಕಂಡು ಹಿಡಿಯಿರಿ

i) ₹ 787.50 ÷ 5

ii) ₹ 24.00 ÷ 6

iii) ₹ 7286.00 ÷ 8

iv) ₹ 6529.50 ÷ 9

v) ₹ 4375.50 ÷ 25



ಒಂದು ಕಂಪೆನಿಯು ಒಟ್ಟು ₹ 26,000 ನ್ನು 40 ಮಂದಿಗೆ ಸಮನಾಗಿ ಹಂಚಿದಾಗ, ಪ್ರತಿಯೊಬ್ಬರಿಗೂ ದೊರೆಯುವ ಹಣವೆಷ್ಟು?

| | |
|---|---|
| 40 ಮಂದಿಗೆ ಹಂಚಬೇಕಾದ ಒಟ್ಟು ಹಣ | = ₹ 26000 |
| ಒಬ್ಬರಿಗೆ ದೊರೆಯುವ ಹಣ | = ₹ 26000 ÷ 40 |
| ಪ್ರತಿಯೊಬ್ಬರಿಗೆ ದೊರೆಯುವ ಹಣ | = ₹ 650 |

```
      650
40)26000
   240
   ---
    200
    200
    ---
      0
```



## ಅಭ್ಯಾಸದ ವೇಳೆ

(1) ಒಬ್ಬನು ₹ **6,750**ಕ್ಕೆ ಒಂದು ಬೀರೋವನ್ನು, ಮೇಜನ್ನು ₹ **4,550** ಕ್ಕೆ ಮತ್ತು ₹ **950** ಕ್ಕೆ ಕುರ್ಚಿಯೊಂದನ್ನು ಕೊಂಡುಕೊಂಡನು. ಹಾಗಾದರೆ ಅವನು ಕೊಂಡುಕೊಂಡ ವಸ್ತುಗಳ ಒಟ್ಟು ಹಣ ಎಷ್ಟು?

(2) **5** ಪುಸ್ತಕಗಳ ಬೆಲೆಯು ₹ **35.00**, ₹ **75.50**, ₹ **275.00**, ₹ **52.00**, ₹ **9.50** ಆಗಿವೆ. ಆ ಐದು ಪುಸ್ತಕಗಳ ಒಟ್ಟು ಬೆಲೆಯೆಷ್ಟೆಂದು ಕಂಡು ಹಿಡಿಯಿರಿ.



(3) ಒಂದು ಬಸ್ಸಿನ ಮೂರು ದಿನಗಳ ಹಣದ ವಸೂಲಿಯು ಕ್ರಮವಾಗಿ ₹ **4,775.50**, ₹ 5350.50 ಮತ್ತು ₹ **4,785.50** ಆಗಿದೆ. ಹಾಗಾದರೆ ಆ ಬಸ್ಸಿನ ಮೂರು ದಿನಗಳ ವಸೂಲಿನ ಹಣ ಒಟ್ಟು ಎಷ್ಟೆಂದು ಕಂಡು ಹಿಡಿಯಿರಿ?

(4) ಒಬ್ಬನು ಒಂದು ದೂರದರ್ಶನದ ಪೆಟ್ಟಿಗೆಯನ್ನು ಕಂತಿನಲ್ಲಿ ₹ **25,000** ಕ್ಕೆ ಕೊಂಡುಕೊಂಡನು. ಅವನು ₹ **12,375** ಪಾವತಿ ಮಾಡಬೇಕೆಂಬುದನ್ನು ಕಂಡು ಹಿಡಿಯಿರಿ.



(5) ಸುಂದರನು ಬ್ಯಾಂಕಿನಲ್ಲಿ ಉಳಿತಾಯ ಮಾಡಿದ ಹಣವು ₹ **76,350** ಆಗಿದೆ. ಅವನ ಹಣವು ಬ್ಯಾಂಕಿನಲ್ಲಿ ₹ **80,000** ಆಗಬೇಕಾದರೆ ಅವನು ಇನ್ನೆಷ್ಟು ಹಣವನ್ನು ಠೇವಣಾತಿ ಮಾಡಬೇಕು?

(6) ಭೂಪತಿಯ ಮಾಸಿಕ ಸಂಬಳವು ₹ **25,000** ಆಗಿದೆ. ಅವನು ಅದರಲ್ಲಿ ₹ **6,435**ನ್ನು ಉಳಿತಾಯ ಮಾಡಿದರೆ, ಅವನು ಖರ್ಚು ಮಾಡಿದ ಒಟ್ಟು ಹಣವೆಷ್ಟು?

(7) **1** ಮೀಟರ್ ಬಟ್ಟೆಯ ಬೆಲೆಯು ₹ **365** ಆಗಿದೆ. ಹಾಗಾದರೆ ಅಂತಹ 15 ಮೀಟರ್ ಬಟ್ಟೆಯ ಬೆಲೆಯು ಎಷ್ಟಾಗುವುದು?

(8) **1** ಕಿ.ಗ್ರಾಂ ಟೋಮೇಟೋವಿನ ಬೆಲೆಯು ₹ **15.50** ಆಗಿದೆ. ಹಾಗಾದರೆ **13** ಕಿ.ಗ್ರಾಂ ಟೋಮೇಟೋವಿನ ಬೆಲೆ ಎಷ್ಟೆಂದು ಕಂಡು ಹಿಡಿಯಿರಿ?



(9) ಅಕ್ಕಿ ಮೂಟೆಯೊಂದರ ಬೆಲೆಯು ₹ **1,750** ಆಗಿದೆ. ಅಂತಹ **24** ಅಕ್ಕಿ ಮೂಟೆಗಳ ಒಟ್ಟು ಬೆಲೆಯನ್ನು ಕಂಡು ಹಿಡಿಯಿರಿ?

(10) **8** ಕಿ.ಗ್ರಾಂ ಸಿಹಿ ತಿಂಡಿಯ ಬೆಲೆಯು ₹ **1,200**. ಆದರೆ **1** ಕಿ.ಗ್ರಾಂ ಸಿಹಿ ತಿಂಡಿಯ ಬೆಲೆ ಎಷ್ಟು?

(11) ಒಬ್ಬನು ಒಂದು ವರ್ಷದಲ್ಲಿ ಒಟ್ಟು ₹ **30,600** ನ್ನು ಬ್ಯಾಂಕಿನ **R.D.** ಯಲ್ಲಿ ಉಳಿತಾಯ ಮಾಡಿದನು. ಹಾಗಾದರೆ ಅವನು ಒಂದು ತಿಂಗಳಲ್ಲಿ ಮಾಡಿದ **R.D.** ಉಳಿತಾಯವೆಷ್ಟು?

(12) 16 ಕಿ.ಗ್ರಾಂ ಬೀನ್ಸ್‌ನ ಬೆಲೆಯು ₹ **360** ಆದರೆ **1** ಕಿ.ಗ್ರಾಂ ಬೀನ್ಸ್‌ನ ಬೆಲೆ ಎಷ್ಟು?

## ಶೈಕ್ಷಣಿಕ ಪ್ರವಾಸ



ಮುಖ್ಯೋಪಧ್ಯಾಯರು : ವಿದ್ಯಾರ್ಥಿಗಳೆ, ಮುಂದಿನವಾರ ನಾವು ಶೈಕ್ಷಣಿಕ ಪ್ರವಾಸಕ್ಕೆ ಹೋಗೋಣವೆಂದು ತೀರ್ಮಾನಿಸಿದ್ದೇವೆ.

ವಿದ್ಯಾರ್ಥಿಗಳು: ಎಷ್ಟು ಮಂದಿ ಈ ಪ್ರವಾಸದಲ್ಲಿ ಭಾಗವಹಿಸಬಹುದು ಸರ್ ? ನಾವೆಷ್ಟು ಹಣವನ್ನು ಇದಕ್ಕಾಗಿ ಕೊಡಬೇಕು ?

ಮು.ಉ : ಪ್ರತಿಯೊಬ್ಬರು ₹ 175ನ್ನು ಪಾವತಿ ಮಾಡಬೇಕು. ಕೇವಲ 55 ವಿದ್ಯಾರ್ಥಿಗಳು ಮಾತ್ರವೇ ಇದರಲ್ಲಿ ಭಾಗವಹಿಸಬಹುದು.

ಪ್ರತಿಯೊಬ್ಬ ವಿದ್ಯಾರ್ಥಿಯು ₹ 175 ನ್ನು ಪಾವತಿ ಮಾಡಿದರೆ, 55ವಿದ್ಯಾರ್ಥಿಗಳು ಪಾವತಿ ಮಾಡಿದ ಒಟ್ಟು ಹಣವೆಷ್ಟು ?

| | | |
|---|---|---|
| 1 ವಿದ್ಯಾರ್ಥಿಯಿಂದ ಪಡೆದ ಒಟ್ಟು ಹಣ | = | ₹ 175 |
| 55 ವಿದ್ಯಾರ್ಥಿಗಳಿಂದ ಪಡೆದ ಒಟ್ಟು ಹಣ | = | ₹ 175 × 55 |
| ಒಟ್ಟು ಹಣ | = | ₹ |

ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿದರು.

ಮು.ಉ : ವಿದ್ಯಾರ್ಥಿಗಳೇ ನಾವು ಕೈಗೊಂಡ ಪ್ರವಾಸವು ನಿಮಗೆ ಉಪಯುಕ್ತವಾಯಿತೇ ?

ವಿದ್ಯಾರ್ಥಿಗಳು: ಹೌದು ಸರ್ .

ಮು.ಉ : ಈ ಪ್ರವಾಸಕ್ಕೆ ಆದ ಒಟ್ಟು ಖರ್ಚೆಷ್ಟೆಂದು ನಿಮಗೆ ಗೊತ್ತೇ ?

ವಿದ್ಯಾರ್ಥಿಗಳು: ಪ್ರವಾಸಕ್ಕೆ ಆದ ಒಟ್ಟು ಖರ್ಚನ್ನು ತಿಳಿಯಲು ನಾವು ಕುತೂಹಲದಿಂದ ಇದ್ದೇವೆ .

ಮು.ಉ : ನಾವು ಬಸ್ಸಿನ ಬಾಡಿಗೆಗಾಗಿ ₹ 4925 ನ್ನು, ಆಹಾರಕ್ಕಾಗಿ ₹ 2250 ನ್ನು, ಮತ್ತು ₹ 1350 ನ್ನು, ಇತರ ಖರ್ಚಿಗಾಗಿ ಎಂದು ಖರ್ಚು ಮಾಡಿದೆವು. ನಮಗೆ ಖರ್ಚಾದ ಒಟ್ಟು ಹಣವೆಷ್ಟೆಂದು ನೀವು ಲೆಕ್ಕ ಮಾಡಿ ಹೇಳುವಿರಾ ?

| | | |
|---|---|---|
| ಬಸ್ಸಿನ ಬಾಡಿಗೆ | = | ₹ 4925 |
| ಆಹಾರಕ್ಕೆ | = | ₹ 2250 |
| ಇತರ ಖರ್ಚು | = | ₹ 1350 |
| ಅವರಿಗಾದ ಒಟ್ಟು ಖರ್ಚು | = | ₹ |



ಮು.ಉ. : ಎಷ್ಟು ಹಣ ಉಳಿದಿದೆಯೆಂದು ಲೆಕ್ಕ ಮಾಡಿ ಹೇಳುವಿರಾ?

ಗಣಿತ

| | | |
|---|---|---|
| ವಸೂಲು ಮಾಡಿದ ಒಟ್ಟು ಹಣ | = | ₹ |
| ಖರ್ಚು ಮಾಡಿದ ಒಟ್ಟು ಹಣ | = | ₹ |
| ಉಳಿದ ಹಣ | = | ₹ |

ವಿದ್ಯಾರ್ಥಿಗಳು : ಉಳಿದ ಹಣವನ್ನು ನಾವೇನು ಮಾಡೋಣ ಸರ್ ?

ಮು.ಉ : ಉಳಿದ ಹಣವನ್ನು ನಾನು ಎಲ್ಲಾ 55 ವಿದ್ಯಾರ್ಥಿಗಳಿಗೆ ಸಮವಾಗಿ ಹಂಚುವೆನು. ಆಗ ನಿಮ್ಮಲ್ಲಿ ಪ್ರತಿಯೊಬ್ಬರಿಗೂ ದೊರೆಯುವ ಹಣ ಎಷ್ಟೆಂದು ಊಹಿಸಿರಿ.

| | | |
|---|---|---|
| ಉಳಿದ ಹಣ | = | ₹ |
| ಪ್ರತಿಯೊಬ್ಬರಿಗೂ ಕೊಡಬೇಕಾದ ಉಳಿದ ಹಣ | = | ₹ ÷ 55 |
| ಪ್ರತಿಯೊಬ್ಬರು ಪಡೆಯುವ ಹಣ | = | ₹ |



ಮೇಲಿನ ಸನ್ನಿವೇಶದಲ್ಲಿ, ಗಣಿತದ ಮೂಲ ಕಾರ್ಯಗಳಾದ ಸಂಕಲನ, ವ್ಯವಕಲನ, ಗುಣಕಾರ ಮತ್ತು ಭಾಗಕಾರ ಎಂಬ ನಾಲ್ಕು ಕಾರ್ಯಗಳನ್ನು ಉಪಯೋಗಿಸಿದ್ದೇವೆ.

ಇದೇ ರೀತಿ ನೀವು ನಿಮ್ಮದೇ ಆದ ಸ್ವಂತ ಲೆಕ್ಕಗಳನ್ನು ಊಹಿಸಿ – ರಚಿಸಿ ವಿದ್ಯಾರ್ಥಿಗಳಿಗೆ ಕೊಡಬಹುದು.



## ಅಭ್ಯಾಸದ ವೇಳೆ

(1) ಪ್ರವೀಣನ ತಿಂಗಳ ಸಂಬಳವು ₹ 16,500. ಅದರಲ್ಲಿ ಅವನು ₹ 1,750 ನ್ನು ಮನೆ ಬಾಡಿಗೆಗೆ, ₹ 500 ನ್ನು ಮನೋರಂಜನೆಗಾಗಿ, ₹ 2,300 ನ್ನು ಮಕ್ಕಳ ಶಿಕ್ಷಣಕ್ಕಾಗಿ ಮತ್ತು ಉಳಿದುದನ್ನು ಆಹಾರಕ್ಕಾಗಿ ಖರ್ಚು ಮಾಡುತ್ತಾನೆ. ಹಾಗಾದರೆ ಅವನು ತನ್ನ ಸಂಬಳದಲ್ಲಿ ಆಹಾರಕ್ಕಾಗಿ ಖರ್ಚು ಮಾಡುವ ಹಣವೆಷ್ಟೆಂದು ಕಂಡು ಹಿಡಿಯಿರಿ.

(2) ಒಬ್ಬನು ₹ 24,500 ಗೆ ಕಂಪ್ಯೂಟರನ್ನು, ₹ 12,750 ಗೆ ಫ್ರಿಡ್ಜನ್ನು, ₹ 12,525 ಗೆ ಬಟ್ಟೆ ಒಗೆಯುವ ಯಂತ್ರವನ್ನು ಕೊಂಡು ಕೊಂಡು ಅಂಗಡಿಯವನಿಗೆ ₹ 50,000 ವನ್ನು ಕೊಟ್ಟನು. ಹಾಗಾದರೆ ಅಂಗಡಿಯವನು ಅವನಿಗೆ ಹಿಂದಿರುಗಿಸಬೇಕಾದ ಹಣವೆಷ್ಟೆಂದು ತಿಳಿಸಿರಿ.

(3) ಶಂಕರನು ತಲಾ ಒಂದಕ್ಕೆ ₹ 12 ರಂತೆ 6 ಸೇಬು ಹಣ್ಣುಗಳನ್ನು, ಮತ್ತು ತಲಾ ಒಂದಕ್ಕೆ ₹ 3.50.ರಂತೆ 12 ಕಿತ್ತಳೆ ಹಣ್ಣುಗಳನ್ನು ಕೊಂಡುಕೊಂಡು ಅಂಗಡಿಯವನಿಗೆ ₹ 200 ನ್ನು ಕೊಟ್ಟನು. ಹಾಗಾದರೆ ಅಂಗಡಿಯವನು ಶಂಕರನಿಗೆ ಹಿಂದಿರುಗಿಸಬೇಕಾದ ಹಣವೆಷ್ಟೆಂದು ಲೆಕ್ಕ ಮಾಡಿ?



(4) ಅರುಳ್ ಎಂಬವನು ಪ್ರತಿಯೊಂದು ತಿಂಗಳಿಗೆ ₹ 3,500 ರಂತೆ ಒಂದು ವರ್ಷದ ಕಾಲ ಬ್ಯಾಂಕ್‌ನಲ್ಲಿ ಉಳಿತಾಯ ಮಾಡಿದನು. ಆ ಹಣವನ್ನು ತನ್ನ ಮೂವರು ಹೆಣ್ಣು ಮಕ್ಕಳಿಗೆ ಸಮನಾಗಿ ಹಂಚಿದಾಗ ಅವನ ಪ್ರತಿಯೊಬ್ಬ ಹೆಣ್ಣು ಮಗಳು ಪಡೆಯುವ ಹಣವೆಷ್ಟೆಂದು ಕಂಡು ಹಿಡಿಯಿರಿ.

## ಯೋಜನಾ ಕಾರ್ಯ



ಐವರು ಗೆಳೆಯರು ಒಂದು ಬಟ್ಟೆಯಂಗಡಿಗೆ ಹೋದರು. ಪ್ರತಿಯೊಬ್ಬರಲ್ಲಿ ₹ 1,000 ಇದೆ. ಕೆಳಗೆ ಕೊಡಲಾದ ಬಟ್ಟೆಗಳಲ್ಲಿ ಯಾವುದಾದರೂ ಮೂರನ್ನು ಮಾತ್ರ ₹ 1,000 ಗೆ ಕೊಂಡುಕೊಳ್ಳಲು ಪ್ರತಿಯೊಬ್ಬರು ಬಯಸಿದರು. ಅವರು ಕೊಂಡುಕೊಂಡ ಬಟ್ಟೆ ಯಾವುದೆಂದು ನೀವು ಊಹಿಸಿ ಅದನ್ನು ಬಿಟ್ಟ ಸ್ಥಳದಲ್ಲಿ ಬರೆಯಿರಿ.



# ಕೆಲಸದ ಹಾಳೆ

(1) ಕವಿತಳು ತನ್ನ 10 ಮಂದಿ ಗೆಳತಿಯರಿಗೆಂದು 10 ಲೀ 500 ಮಿ.ಲೀ ಹಣ್ಣಿನ ರಸವನ್ನು ಮಾಡಿ ಅವರಿಗೆ ಸಮನಾಗಿ ಹಂಚಿದಳು. ಅವಳ ಪ್ರತಿಯೊಂದು ಗೆಳತಿಗೆ ದೊರೆಯುವ ಹಣ್ಣಿನ ರಸವು ________.

i) 1 ಲೀ 500 ಮಿ.ಲೀ  ii) 1 ಲೀ 50 ಮಿ.ಲೀ
iii) 105 ಲೀ  iv) 1000 ಲೀ

(2) ರಾಮನು ರಾತ್ರಿ ಅಪರಾಹ್ನ 10ಕ್ಕೆ ಮಲಗಿ ಬೆಳಿಗ್ಗೆ ಪೂರ್ವಾಹ್ನ 6.30 ಕ್ಕೆ ಎದ್ದರೆ ಅವನು ನಿದ್ರಿಸಿದ ಒಟ್ಟು ಸಮಯ ________ ಗಂಟೆಗಳು.

i) $6\frac{1}{2}$ ಗಂಟೆಗಳು. ii) $4\frac{1}{2}$ ಗಂಟೆಗಳು. iii) $5\frac{1}{2}$ ಗಂಟೆಗಳು. iv) $8\frac{1}{2}$ ಗಂಟೆಗಳು.

(3) ರೈಲುಗಾಡಿಯೊಂದು ಅಪರಾಹ್ನ 3 ಕ್ಕೆ ಹೊರಟು ಮರುದಿನ ಪೂರ್ವಾಹ್ನ 9 ಕ್ಕೆ ಕನ್ಯಾಕುಮಾರಿಯನ್ನು ತಲುಪಿದರೆ ಆ ರೈಲುಗಾಡಿಯು ಕನ್ಯಾಕುಮಾರಿಯನ್ನು ತಲುಪಲು ತೆಗೆದುಕೊಂಡ ಸಮಯವು ________.

i) 6 ಗಂಟೆಗಳು.  ii) 9 ಗಂಟೆಗಳು.
iii) 12 ಗಂಟೆಗಳು.  iv) 18 ಗಂಟೆಗಳು.

(4) ಅಪರಾಹ್ನ 3 ಗಂಟೆಯ ಬಳಿಕ ಗಡಿಯಾರದಲ್ಲಿ 75 ನಿಮಿಷಗಳು ದಾಟಿದರೆ, ಆಗ ಸರಿಯಾದ ಸಮಯ ________.

i) 3 : 45 ಅಪರಾಹ್ನ  ii) 3 : 75 ಅಪರಾಹ್ನ
iii) 4 : 15 ಅಪರಾಹ್ನ  iv) 4 : 75 ಅಪರಾಹ್ನ

(5) ನಾಲ್ಕು ಗಂಟೆಗಳ ಕಾಲಾವಧಿಯ ಒಂದು ಚಲನಚಿತ್ರವು ಅಪರಾಹ್ನ 5:15 ಕ್ಕೆ ಕೊನೆಗೊಂಡಿತು. ಹಾಗಾದರೆ ಆ ಚಲನಚಿತ್ರವು ಆರಂಭವಾದ ಸಮಯ ________.

i) 9 : 15 ಅಪರಾಹ್ನ  ii) 1 : 15 ಅಪರಾಹ್ನ
iii) 56 ಗಂಟೆಗಳು  iv) 63 ಗಂಟೆಗಳು

(6) ಶೇಖರನು 4 ನೋಟ್ ಪುಸ್ತಕಗಳಿಗೆ ₹ 15.00 ನ್ನು ಮತ್ತು ಎರಡು ಪೆನ್ಸಿಲುಗಳಿಗೆ ₹ 3.50 ನ್ನು ಖರ್ಚು ಮಾಡಿದನು. ಹಾಗಾದರೆ ಅವನು ಖರ್ಚು ಮಾಡಿದ ಒಟ್ಟು ಹಣ ________.

i) ₹ 67.00  ii) ₹ 18.50  iii) ₹ 37.00  iv) ₹ 60.00

(7) ಈ ಆಕೃತಿಯಲ್ಲಿ ಕಂಡು ಬರುವ ಬೆಂಕಿ ಪೆಟ್ಟಿಗೆಗಳ ಸಂಖ್ಯೆಯು ________.

i) 8  ii) 5  iii) 4  iv) 7

# ‘ನನ್ನಿಂದ ಸಾಧ್ಯ, ನಾನು ಮಾಡಿದೆ’
# ವಿದ್ಯಾರ್ಥಿಗಳ ಚಟುವಟಿಕೆ ದಾಖಲೆ

**ವಿಷಯ :**

| ಕ್ರ.ಸಂ | ತಾರೀಖು | ಪಾಠದ ಸಂಖ್ಯೆ | ಪಾಠದ ಹೆಸರು | ಚಟುವಟಿಕೆಗಳು | ಅಭಿಪ್ರಾಯಗಳು |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |